ಸಂಪುಟ: 01 ಸಂಚಿಕೆ: 16 ಪುಟ: 04 ಬೆಲೆ: 02 ಶನಿವಾರ ಜೂನ್ 20 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:16 Pages:04 Price:02 SATURDAY JUNE 20 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಮಾಡಿರುವ ಅಲ್ಪ ಕಾರ್ಯವನ್ನು ಹಿರಿದಾಗಿ ಹಿಗ್ಗಿಸುವುದರಲ್ಲಿ ಹಿತವಿಲ್ಲ.ಸಹಾಯ ಎಂತಹದ್ದೆ ಆಗಿದ್ದರೂ ಅದು ತಲುಪುವವ-ರಿಗೆ ತಲುಪಿದಾಗಷ್ಟೆ ಮನಸ್ಸು ನೆಮ್ಮದಿಗೊಳ್ಳುವುದು.



ವಾಣಿ ಭಂಡಾರಿ.

# ಶಾಲಾ ಕಾರ್ಯಕ್ರಮದಲ್ಲಿ ಪಾಕ್ ಹಾಡು

## ಪ್ರಾಂಶುಪಾಲ, ಇಬ್ಬರು ಶಿಕ್ಷಕರ ವಿರುದ್ಧ ಎಫ್‌ಐಆರ್

**ಜಲಾ: ಮಹಾರಾಷ್ಟ್ರದ ಜಲ್ನಾ ಜಿಲ್ಲೆಯಲ್ಲಿ ಶಾಲಾ ಕಾರ್ಯಕ್ರಮವೊಂದರಲ್ಲಿ ಪಾಕಿಸ್ತಾನಿ ಹಾಡನ್ನು ಪ್ರದರ್ಶಿಸಿದ ಆರೋಪದ ಮೇಲೆ ಪ್ರಾಂಶುಪಾಲರು ಮತ್ತು ಇಬ್ಬರು ಶಿಕ್ಷಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.**



ಪರ್ತೂರ್ ಪೊಲೀಸರು ಪ್ರಾಂಶುಪಾಲ ವಾಜಿಯೊದ್ದೀನ್ ಸಿದ್ದಿಕಿ ಮತ್ತು ಇತರ ಇಬ್ಬರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 152 (ಭಾರತದ ಸಾರ್ವಭೌಮತೆ, ಏಕತೆ ಮತ್ತು ಸಮಗ್ರತೆಗೆ ಅಪಾಯವನ್ನುಂಟುಮಾಡುವ ಕೃತ್ಯಗಳು), 196 (ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವುದು), 197 (ರಾಷ್ಟ್ರೀಯ ಏಕೀಕರಣದ ಮೇಲೆ ಪರಿಣಾಮ ಬೀರುವ ತಪ್ಪು ಮಾಹಿತಿಯನ್ನು ಹರಡುವುದು) ಮತ್ತು 353 (ಸಾರ್ವಜನಿಕ ಆತಂಕಕ್ಕೆ ಕಾರಣವಾಗುವ ಸುಳ್ಳು ಮಾಹಿತಿಯನ್ನು ಪ್ರಸಾರ ಮಾಡುವುದು) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಈ ಹಿಂದೆ, ಮಾರ್ಚ್ 2025 ರಲ್ಲಿ ನಡೆದ ವಾರ್ಷಿಕ ಸಭೆಯ ಸಮಯದಲ್ಲಿ ಪಾರ್ತೂರ್‌ನಲ್ಲಿರುವ ಕಿಡ್ ಸ ವರ್ಲ್ಡ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳು ಪಾಕಿಸ್ತಾನಿ ಹಾಡಿಗೆ ನೃತ್ಯ ಮಾಡಿದ್ದಾರೆ ಎಂದು ಕೆಲವು ಸಾಮಾಜಿ-ಕ ಮಾಧ್ಯಮ ಪೋಸ್ಟ್‌ಗಳು ಆರೋಪಿಸಿದ್ದವು ಮತ್ತು ಪ್ರದರ್ಶನದ ಸಮಯದಲ್ಲಿ ಪಾಕಿಸ್ತಾನಿ ಉಗ್ರಗಾಮಿ ಮುಮ್ತಾಜ್ ಖಾದ್ರಿ ಅವರ ಛಾಯಾಚಿತ್ರವನ್ನು ಪ್ರದರ್ಶಿಸಲಾಗಿತ್ತು.

ಸ್ಥಳೀಯ ಬಿಜೆಪಿ ಶಾಸಕ ಬಬನ್‌ರಾವ್ ಲೋಣಿಕರ್ ಶಾಲೆಯ ಮಾನ್ಯತೆಯನ್ನು ರದ್ದುಗೊಳಿಸುವುದು ಸೇ-ರಿದಂತೆ ಶಾಲಾ ಆಡಳಿತದ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.ಶಾಲಾ ಆಡಳಿತ ಮಂಡಳಿ ಆರೋಪಗಳನ್ನು ಬಲವಾಗಿ ನಿರಾಕರಿಸಿದೆ. ಕಾರ್ಯಕ್ರಮದಲ್ಲಿ ಬಳಸಲಾದ ಸಂಗೀತವು ಜನಪ್ರಿಯ ಟರ್ಕಿಶ್ ಟಿವಿ ಧಾರಾವಾಹಿ ಎರ್ತುಗ್ರುಲ್ ಘಾಜಿಯದ್ದಾಗಿದ್ದು, ಅದು ಪಾಕಿಸ್ತಾನಿ ಹಾಡಲ್ಲ ಎಂದು ಪ್ರಾಂಶುಪಾಲ ಸಿದ್ದಿಕಿ ಹೇಳಿದರು.

ಪ್ರದರ್ಶನದ ಸಮಯದಲ್ಲಿ ತೋರಿಸಲಾದ ಚಿತ್ರವು ಎರ್ತುಗ್ರುಲ್ ಘಾಜಿ ಯ ನಟನದ್ದಾಗಿತ್ತು. ಕೆಲವು ವ್ಯಕ್ತಿಗಳು ದೃಶ್ಯಗಳನ್ನು ತಿರುಚಿ ಸಾಮಾಜಿಕ ಮಾಧ್ಯಮದಲ್ಲಿ ದಾರಿತಪ್ಪಿಸುವ ವಿಷಯವನ್ನು ಪ್ರಸಾರ ಮಾಡಿದ್ದಾರೆ ಎಂದು ಅವರು ವರದಿಗಾರರಿಗೆ ತಿಳಿಸಿದರು.ವಾಸ್ತವಗಳನ್ನು ಖಚಿತಪಡಿಸಿಕೊಳ್ಳಲು ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

## ಚಿನ್ನ ? ಬೆಳ್ಳಿ ಸತತ ಇಳಿಮುಖ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕಳೆದ ನಾಲ್ಕು ದಿನಗಳಿಂದ ಚಿನ್ನದ ದರ ನಿರಂತರವಾಗಿ ಕುಸಿತ ಕಂಡಿದೆ. ಅದೇ ರೀತಿ ಬೆಳ್ಳಿದರವೂ ಕುಸಿತವಾಗಿದೆ. ಜೂನ್ ತಿಂಗಳ ಆರಂಭದಿಂದಲೂ ಇಳಿಮುಖವಾಗಿದ್ದ ಚಿನ್ನದ ದರ ಜೂ.12 ರಿಂದ ಜೂ.15ರವರೆಗೆ ಅಲ್ಪಪ್ರಮಾಣದಲ್ಲಿ ಏರಿಕೆಯಾಗಿತ್ತು. ಅನಂತರ ಇಳಿಮುಖವಾಗಿ ಸಾಗಿದ ಚಿನ್ನದ ದರವು ಇಂದೂ ಕೂಡ ಕುಸಿತ ಕಂಡಿದೆ.**



ಲಭ್ಯವಿರುವ ಮಾರುಕಟ್ಟೆ ಮಾಹಿತಿ ಪ್ರಕಾರ, ಇಂದು ಬೆಳಿಗ್ಗೆ 24 ಕ್ಯಾರೆಟ್‌ನ ಚಿನ್ನವು ಒಂದು ಗ್ರಾಂಗೆ 365 ರೂ.ಗಳಷ್ಟು ಇಳಿಕೆಯಾಗಿ 14,586 ರೂ.ಗಳಷ್ಟಿದೆ. 22 ಕ್ಯಾರೆಟ್‌ನ ಚಿನ್ನವು ಒಂದು ಗ್ರಾಂಗೆ 335 ರೂ.ಗಳಷ್ಟು ಕಡಿಮೆಯಾಗಿದ್ದು, 13,370 ರೂ.ಗಳಷ್ಟಿದೆ. 18 ಕ್ಯಾರೆಟ್‌ನ ಚಿನ್ನವು ಒಂದು ಗ್ರಾಂಗೆ 274 ರೂ.ನಷ್ಟು ಇಳಿಕೆಯಾಗಿದ್ದು, 10,939 ರೂ.ನಷ್ಟಿದೆ. ಪ್ಲಾಟಿನಂ ದರವು 10 ಗ್ರಾಂಗೆ 3,040 ರೂ. ಇಳಿಕೆಯಾಗಿದ್ದು, 50,400 ರೂ.ನಷ್ಟಿದೆ. ಇನ್ನು ಬೆಳ್ಳಿ ದರವು ಕಳೆದೆರಡು ದಿನಗಳಿಂದ ಇಳಿಮುಖದ ಹಾದಿ ಹಿಡಿದಿದೆ. ಜೂನ್ ಆರಂಭದಿಂದಲೂ ನಿರಂತರ ಇಳಿಕೆಯತ್ತ ಸಾಗಿದ್ದ ಬೆಳ್ಳಿಯು ಜೂ.12 ರಂದು ಒಂದು ಕೆಜಿಗೆ 10 ಸಾವಿರ ರೂ.ಗಳಷ್ಟು ಏರಿಕೆಯಾಗಿತ್ತು. ಅನಂತರ ಎರಡು ದಿನ ಸ್ಥಿರವಾಗಿದ್ದ ದರವು ಜೂ.15 ರಂದು ಮತ್ತೆ 5 ಸಾವಿರ ರೂ.ನಷ್ಟು ಏರಿಕೆಯಾಗಿತ್ತು. ಅನಂತರ 2 ದಿನ ಸ್ಥಿರವಾಗಿದ್ದ ಬೆಳ್ಳಿದರವು ನಿನ್ನೆ ಒಂದು ಕೆಜಿಗೆ 5 ಸಾವಿರ ರೂ. ಹಾಗೂ ಇಂದು 10 ಸಾವಿರ ರೂ.ಗಳಷ್ಟು ಇಳಿಕೆಯಾಗಿದೆ. ಪ್ರಸ್ತುತ 2,50,000 ರೂ.ನಷ್ಟಿದೆ. ಜಾಗತಿಕ ಮಟ್ಟದಲ್ಲಿ ಉಂಟಾಗುವ ವಿದ್ಯಮಾನಗಳು ಹಾಗೂ ಮಾರುಕಟ್ಟೆಯಲ್ಲಿನ ಏರಿಳಿತಗಳ ಪರಿಣಾಮ ಚಿನಿವಾರ ಪೇಟೆಯ ಮೇಲೂ ಆಗಲಿದ್ದು, ಆಗಾಗ್ಗೆ ಚಿನ್ನ ಮತ್ತು ಬೆಳ್ಳಿ ದರಗಳಲ್ಲಿ ವ್ಯತ್ಯಾಸಗಳಾಗುವುದು ಸಹಜ ಎಂಬ ಅಭಿಪ್ರಾಯ ವರ್ತಕರಲ್ಲಿದೆ. ಆದರೆ ದಾಖಲೆ ಪ್ರಮಾಣದಲ್ಲಿ ಏರಿಕೆ ಕಂಡಿದ್ದ ಚಿನ್ನ–ಬೆಳ್ಳಿ ದರಗಳಲ್ಲಿ ತುಸು ಇಳಿಕೆಯಾಗುತ್ತಿರುವುದು ಆಭರಣ ಪ್ರಿಯರು ಹಾಗೂ ಗ್ರಾಹಕರಲ್ಲಿ ಸ್ವಲ್ಪ ಸಮಾಧಾನ ತಂದಿದೆ.

# ನನ್ನ ಪತ್ನಿಯ ಜೀವ ಉಳಿಸಿ : ತಿಮ್ಮಾರೆಡ್ಡಿ 'ಮಾನವೀಯ' ಮನವಿ

## ಕಿಡ್ನಿ ಕಸಿ ಚಿಕಿತ್ಸೆಗೆ ಆರ್ಥಿಕ ನೆರವು ಕೋರಿದ ಪತಿ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಬಡತನದ ಮಧ್ಯೆ ಜೀವಿನ ನೆಡುಸುವುದು ತೀವ್ರ ಕ್ಲಿಷ್ಟಕರ, ಅದರಲ್ಲೂ ಅನಾರೋಗ್ಯಕ್ಕೆ ತುತ್ತಾದರಂತೂ ಬದುಕು ಸಾಕೇ ಸಾಕು ಎನ್ನುವ ಜಿಗುಪ್ಸೆ, ಹತಾಶೆಗಳು ಸೃಷ್ಟಿಯಾಗಿಯೇ ಬಿಡುತ್ತವೆ. ಇಂತಹ ಪ್ರಸಂಗಕ್ಕೆ ತುತ್ತಾದ ಕುಟುಂಬ ಕೊಪ್ಪಳ ತಾಲೂಕಿನ ಬಸಾಪುರ ಗ್ರಾಮದ ನಿವಾಸಿ ತಿಮ್ಮಾರೆಡ್ಡಿ ಅವರು ತಮ್ಮ ಪತ್ನಿ ಹುಲಿಗೆಮ್ಮ ಅವರ ಕಿಡ್ನಿ ಚಿಕಿತ್ಸೆಗೆ ಆರ್ಥಿಕ ನೆರವು ನೀಡುವಂತೆ ಸಾರ್ವಜನಿಕರಲ್ಲಿ ಮಾನವೀಯ ಮನವಿ ಮಾಡಿದ್ದಾರೆ.**

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ಪತ್ನಿ ಹುಲಿಗೆಮ್ಮ ಅವರ ಎರಡು ಕಿಡ್ನಿಗಳು ಸಂಪೂರ್ಣವಾಗಿ ವೈಫಲ್ಯಗೊಂಡಿದ್ದು, ವಾರದಲ್ಲಿ ಎರಡು ಬಾರಿ ಡಯಾಲಿಸಿಸ್ ಮಾಡಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ತಿಳಿಸಿದರು. ವೈದ್ಯರ ಸಲಹೆಯಂತೆ ಡಯಾಲಿಸಿಸ್ ಚಿಕಿತ್ಸೆ ನಿರಂತರವಾಗಿ ಮುಂದುವರಿಯದಿದ್ದರೆ ಜೀವಕ್ಕೆ ಅಪಾಯ ಉಂಟಾಗುವ ಸಾಧ್ಯತೆಯಿದೆ ಎಂದು ಹೇಳಿದರು.

ಈ ಸಂಬಂಧ ಹುಬ್ಬಳ್ಳಿ, ಧಾರವಾಡ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ವೈದ್ಯರನ್ನು ಸಂಪರ್ಕಿಸಿದ್ದು, ಕಿಡ್ನಿ ಕಸಿ ಮಾಡಿದರೆ ಆರೋಗ್ಯ ಸುಧಾ–ರಿಸುವ ಸಾಧ್ಯತೆ ಇದೆ ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ ಎಂದು ವಿವರಿಸಿದರು. ಆದರೆ ಕುಟುಂಬವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಕಿಡ್ನಿ ಕಸಿ ಹಾಗೂ ಇತರೆ ಚಿಕಿತ್ಸೆಗಳಿಗಾಗಿ ಸುಮಾರು 10 ಲಕ್ಷ ವೆಚ್ಚವಾಗಲಿದೆ. ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುವ ತಮಗೆ ಇಬ್ಬರು ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಜೊತೆಗೆ ಚಿಕಿತ್ಸಾ ವೆಚ್ಚವನ್ನು ಭರಿಸುವುದು ಅತ್ಯಂತ ಕಷ್ಟಕರವಾಗಿದೆ ಎಂದು ನೋವು ತೋಡಿಕೊಂಡರು.

ಹೀಗಾಗಿ ದಾನಿಗಳು, ಸಂಘ,ಸಂಸ್ಥೆಗಳು ಹಾಗೂ ಸಾರ್ವಜನಿಕರು ಮಾನವೀಯ ನೆಲೆಯಲ್ಲಿ ನೆರವು ನೀಡುವಂತೆ ಅವರು ವಿನಂತಿಸಿದರು. ನೆರವು ನೀಡಲು ಇಚ್ಛಿಸುವವರು ಫೋನ್ ಪೇ ಸಂಖ್ಯೆ : 7795061761 ಗೆ ಆರ್ಥಿಕ ಸಹಾಯ ಮಾಡಬಹುದು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಪತ್ನಿ, ಅವರು ಮಕ್ಕಳು ಉಪಸ್ಥಿತರಿದ್ದರು.

## ಬುತ್ತಿ ಬಸವೇಶ್ವರ ದೇವಸ್ಥಾನದಲ್ಲಿ ಯೋಗ ಶಿಬಿರ

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ಪಟ್ಟಣದ ಶ್ರೀ ಬುತ್ತಿ ಬಸವೇಶ್ವರ ದೇವಸ್ಥಾನದಲ್ಲಿ ಯಲಬುರ್ಗಾ ಪತಂಜಲಿ ಯೋಗ ಸಮಿತಿಯವರಿಂದ ಶಿಬಿರಾರ್ಥಿಗಳಿಗೆ ಯೋಗಾಸನಗಳ ಬಗ್ಗೆ ಮಾಹಿತಿ ಮಾರ್ಗದರ್ಶನ ನೀಡಲಾಯಿತು.**



ಈ ವೇಳೆ ಕೊಪ್ಪಳ ಜಿಲ್ಲಾ ಅದ್ಯಕ್ಷ ವೀರೇಶ ಬಂಗಾರ ಶೆಟ್ಟರ, ಗೌರವ ಅದ್ಯಕ್ಷ ಸಂಗಣ್ಣ ಟೆಂಗಿನಕಾಯಿ, ಹಾಗೂ ಯೋಗ ತಬೇತಿದಾರ ಆಯುಷ್ಮಾನ ಇಲಾಖೆಯ ಲೋಕೇಶ ಲಮಾಣಿ, ಯೋಗ ಸಮಿತಿಯ ಶರಣಬಸಪ್ಪ ದಾನಕ್ಕೆ ಇವರನ್ನು ಕುಷ್ಟಗಿಯ ಪತಂಜಲಿ ಸಮಿತಿಯವರು ಸನ್ಮಾನಿಸಿದರು. ಈ ವೇಳೆ ಅಚಲರಾಂ,ಪಂಕಜಾ ವಾಲಿಕಾರ, ಗಣೇಶ ಗುಡ್ಡದ,ಲತಾ ಸ್ಥಾವರಮಠ ಕುಸುಮಕ್ಕ ಶ್ಯಾಟಿ ಶೀವಲೀಲಾ ದಾವಣಗೇರಿ ,ಭಾರತಿ ಶೆಟ್ಟಿ, ಕುಮಾರ ಬಡಿಗೇರ, ಹನುಮಂತಪ್ಪ ಜಾಲಿಮರದ ಸೇರಿದಂತೆ ಇತರರು ಇದ್ದರು.

# ಸಾಮಾಜಿಕ ಹೋರಾಟಗಾರ ಮಂಜುನಾಥ ಸಾಲಿಮಠಗೆ ಸನ್ಮಾನ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಇತ್ತೀಚೆಗೆ ಗದಗ ಜಿಲ್ಲೆಯ ಪ್ರತಿಷ್ಠಿತ ಮಾಧ್ಯಮ ಸಂಸ್ಥೆಯಿಂದ ಪ್ರದಾನವಾಗುವ "ಕಮ್ಯುನಿಟಿ ಚೇಂಜ್ ಮೇಕರ್ಸ್ ಅವಾರ್ಡ್" ಪ್ರಶಸ್ತಿಗೆ ಭಾಜನರಾದ ಸಾಮಾಜಿಕ ಹೋರಾಟಗಾರ, ಮಾಹಿತಿ ಹಕ್ಕು ಕಾರ್ಯಕರ್ತ ಹಾಗೂ ಕರ್ನಾಟಕ ನವ ನಿರ್ಮಾಣ ಸೇನೆಯ ಕೊಪ್ಪಳ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ ಸಾಲಿಮಠ ಅವರನ್ನು ಕೊಪ್ಪಳ ಜಿಲ್ಲಾ ಹಾಗೂ ತಾಲೂಕ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**

ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಜಾಕಿರ್ ಹುಸೇನ್ ಕುಕನೂರ್, ಜಿಲ್ಲಾಧ್ಯಕ್ಷ ಮಾರ್ತಂಡರಾವ ದೇಸಾಯಿ, ಜಿಲ್ಲಾ ಗೌರವಾಧ್ಯಕ್ಷ ಶಂಕರಗೌಡ ಮಾಲಿಪಾಟೀಲ್, ತಾಲೂಕ ಅಧ್ಯಕ್ಷ ಶಿವಾನಂದಯ್ಯ ಕುಣಿಕೇರಿಮಠ, ಖಜಾಂಚಿ ಕಳಕಪ್ಪ ಬಿನ್ನಾಳ, ರಾಜ್ಯ ಪರಿಷತ್ ಸದಸ್ಯ ಸೋಮರೆಡ್ಡಿ ಡಂಬ್ರಳ್ಳಿ, ಸಹ ಕಾರ್ಯದರ್ಶಿ ಶೇಖರ್ ಅಂಕದ, ನಿರ್ದೇಶಕ ರಾಘವೇಂದ್ರ ಗುಮ್ಮ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಸನ್ಮಾನ ಸ್ವೀಕರಿಸಿದ ಬಳಿಕ ಮಾತನಾಡಿದ ಮಂಜುನಾಥ ಸಾಲಿಮಠ ಅವರು, ಪ್ರೌಢಶಾಲಾ ಸಹ ಶಿಕ್ಷಕರ ಸಂಘವು ಶಿಕ್ಷಕರ ಹಿತಾಸಕ್ತಿಗಳ ರಕ್ಷಣೆಗಾಗಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದು,

ಸಂಘದ ಅಭಿವೃದ್ಧಿ ಹಾಗೂ ಸೇವಾ ಚಟುವಟಿಕೆಗಳನ್ನು ಸಹಿಸದ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಸಂಘದ ವಿರುದ್ಧ ಪಿತೂರಿ ನಡೆಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಸಂಘದ ವಿರುದ್ಧ ಅಪಪ್ರಚಾರ ಹಾಗೂ ಪಿತೂರಿ ನಡೆಸುತ್ತಿರುವವರನ್ನು ಗುರುತಿಸಿ, ಅವರ ವಿರುದ್ಧ ಕಾನೂನುಬದ್ಧ ಮತ್ತು ಸಾಮಾಜಿಕ ಹೋರಾಟ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು. ಶಿಕ್ಷಕರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡುವ ಯಾವುದೇ ಪ್ರಯತ್ನವನ್ನು ಸಹಿಸಿಕೊಳ್ಳುವುದಿಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು ಸಾಲಿಮಠ ಅವರ ಸಾಮಾಜಿಕ ಸೇವೆ, ಮಾಹಿತಿ ಹಕ್ಕು ಚಳವಳಿಯಲ್ಲಿನ ಕೊಡುಗೆ ಹಾಗೂ ಜನಪರ ಹೋರಾಟಗಳನ್ನು ಶ್ಲಾಘಿಸಿದರು. ಕಾರ್ಯಕ್ರಮವು ಆತ್ಮೀಯ ವಾತಾವರಣದಲ್ಲಿ ನಡೆಯಿತು.

# ವಿವಿಧ ಅಂಗನವಾಡಿ ಕೇಂದ್ರಗಳಿಗೆ ಸಿಡಿಪಿಒ ಭೇಟಿ

ಅ.ಶ. ಸುದ್ದಿ ಕುಕನೂರು

**ಕುಕನೂರು: ಶುಕ್ರವಾರದಂದು ತಾಲ್ಲೂಕಿನ ವಿವಿಧ ಅಂಗನಾಡಿ ಕೇಂದ್ರಗಳ ಮೂಲಭೂತ ಸೌಕರ್ಯ, ಸೌಲಭ್ಯ ಹಾಗೂ ಮಕ್ಕಳ ಕಲಿಕೆ, ಸ್ವಚ್ಚತೆಗಳ ಕು–ರಿತು ಯಲಬುರ್ಗಾ ತಾಲ್ಲೂಕ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಬೆಟದೇಶ ಮಾಳೇಕೊಪ್ಪ ಭೇಟಿ ನೀಡಿ ಪರೀಶಿಲನೆ ನಡೆಸಿದರು.**



ಪಟ್ಟಣದ 11ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ ವೇಳೆ ಅಲ್ಲಿನ ಕುಡಿಯುವ ನೀರಿನ ತೊಂದರೆ ಕುರಿತು ಪಟ್ಟಣ ಪಂಚಾಯತಿ ಅಧ್ಯಕ್ಷರೊಂದಿಗೆ ಮಾತನಾಡಿ ಪೈಪ್ ಲೈನ್ ಅಳವಡಿಸಿ ನೀರು ಪೂರೈಸುವಂತೆ ಸೂಚಿಸಿದರು. ನಂತರ ಅಂಗನವಾಡಿ ಕೇಂದ್ರದ ಮುಂದೆ ತೆರೆದ ಚರಂಡಿ ಇದ್ದು ಇದರಿಂದ ಸೊಳ್ಳೆ ಹಾವಳಿ ಹೆಚ್ಚಾಗುವುದಲ್ಲದೇ ಮಕ್ಕಳಿಗೆ ಅಪಾಯವಾಗುವ ಸನ್ನಿವೇಶಗಳಿದ್ದು ಅವುಗಳ ಮೇಲೆ ಮುಚ್ಚಳಿಕೆಗಳನ್ನು ಅಳವಡಿಸುವಂತೆ ತಿಳಿಸಿದರು.

ತಾಲ್ಲೂಕಿನ ವಿವಿಧ ಅಂಗನವಾಡಿ ಕೇಂದ್ರಗಳಲ್ಲಿ ಅವಶ್ಯವಿರುವ ಮೂಲಭೂತ ಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದ್ದು ಆದ–'ಷ್ಟು ತೀವ್ರದಲ್ಲಿ ಪರಿಹರಿಸಲಾಗುವುದು ಎಂದರು. ನಂತರ ಮಕ್ಕಳೊಂದಿಗೆ ಮಕ್ಕಳಾಗಿ ಮಕ್ಕಳ ಜೊತೆ ಪಾಠಗಳ ಕಲಿಕೆ ಕುರಿತು ಮಾತನಾಡಿದರು, ಮಕ್ಕಳನ್ನು ಪ್ರೋತ್ಸಾಹಿಸಿ ಮಕ್ಕಳನ್ನು ಅಕ್ಕರೆಯಿಂದ ಮಾತನಾಡಿಸಿದರು. ಈ ಸಂದರ್ಭದಲ್ಲಿ ಅಂಗನವಾಡಿ ಶಿಕ್ಷಕಿ ಲಲಿತಾ ಮುಂದಲಮನಿ, ಅಂಗನವಾಡಿ ಸಹಾಯಕಿ ಅಭಿದಾ ಬೇಗಂ ಸೇರಿದಂತೆ ಮಕ್ಕಳ ಪಾಲಕರು, ವಾರ್ಡಿನ ಸಾರ್ವಜನಿಕರು ಇದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಕಟ್ಟಡ ಕಾರ್ಮಿಕರ ವಿವಿಧ ಸೌಲಭ್ಯಗಳ ಅವ್ಯವಹಾರಗಳ ತನಿಖೆಗೆ ಮನವಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕಟ್ಟಡ ಕಾರ್ಮಿಕರ ವಿವಿಧ ಸೌಲಭ್ಯಗಳ ವಿಳಂಬ ವಿಲೇವಾರಿ, ಬಾಕಿ ಇರುವ ಶೈಕ್ಷಣಿಕ ಸಹಾಯಧನ ಬಿಡುಗಡೆ, ಕಾರ್ಮಿಕರ ಹೆಸರಿನಲ್ಲಿ ನಡೆಯುತ್ತಿರುವ ಕಿಟ್ ಖರೀದಿ ಅವ್ಯವಹಾರಗಳ ತನಿಖೆ ನಡೆಸಿ, ಜಿಲ್ಲಾ ಎಕ್ಸಿಕ್ಯೂಟಿವ್ ಅಧಿಕಾರಿ ಹೇಮಂತ್ ಸಿಂಗ್ ಅವರನ್ನು ಸೇವೆಯಿಂದ ವಜಾಗೊಳಿಸುವಂತೆ ಆಗ್ರಹಿಸಿ ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.**

ನಗರದ ಜಿಲ್ಲಾ ಆಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಜಿಲ್ಲಾ ಚುನಾವಣಾ ವಿಭಾಗದ ತಹಶೀಲ್ದಾರ್ ರವಿ ಕುಮಾರ್ ವಸ್ತ್ರದ ಅವರ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಿ. ರವಿ ಚನ್ನಣ್ಣನವರ್ ಅವರಿಗೆ ಶುಕ್ರವಾರ ಸಲ್ಲಿಸಿದ ಮನವಿಯಲ್ಲಿ ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರವನ್ನು ರದ್ದುಪಡಿಸುವುದು ಸೇರಿದಂತೆ ಕಾರ್ಮಿಕರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿ, ಕೊಪ್ಪಳ ಜಿಲ್ಲೆಯ ಪರವಾಗಿ ಈ ಮನವಿಯನ್ನು ಸಲ್ಲಿಸಿದರು.

ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಹಲವಾರು ಬಾರಿ ಮನವಿಗಳು, ಪ್ರತಿಭಟನೆಗಳು ಹಾಗೂ ಸಭೆಗಳ ಮೂಲಕ ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಸರ್ಕಾರ ಮತ್ತು ಕಲ್ಯಾಣ ಮಂಡಳಿಯ ಗಮನಕ್ಕೆ ತರಲಾಗಿದ್ದರೂ, ಬಹುತೇಕ ಸಮಸ್ಯೆಗಳು ಇಂದಿಗೂ ಬಗೆಹರಿಯದೆ ಉಳಿದಿವೆ. ಇದರಿಂದ ಜಿಲ್ಲೆಯ ಸಾವಿರಾರು ಕಟ್ಟಡ ಕಾರ್ಮಿಕರಲ್ಲಿ ತೀವ್ರ ಅಸಮಾಧಾನ ಮತ್ತು ಆಕ್ರೋಶ ವ್ಯಕ್ತವಾಗುತ್ತಿದೆ. ಕೊಪ್ಪಳ ಜಿಲ್ಲೆಯು ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದ್ದು, ಜಿಲ್ಲೆಯ ಬಹುತೇಕ ಕುಟುಂಬಗಳು ಕಟ್ಟಡ ನಿರ್ಮಾಣದ ದುಡಿಮೆಯನ್ನೇ ಅವಲಂಬಿಸಿವೆ. ಆದರೆ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳು



ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ತಲುಪುತ್ತಿಲ್ಲ.

ವೈದ್ಯಕೀಯ ನೆರವು, ಮದುವೆ ಸಹಾಯಧನ, ಹೆರಿಗೆ ಭತ್ಯೆ, ಪಿಂಚಣಿ, ಮರಣ ಪರಿಹಾರ ಹಾಗೂ ಶೈಕ್ಷಣಿಕ ಸಹಾಯಧನ ಸೇರಿದಂತೆ ವಿವಿಧ ಯೋಜನೆಗಳ ಸಾವಿರಾರು ಅರ್ಜಿಗಳು ಉದೀರ್ಘಕಾಲದಿಂದ ಬಾಕಿ ಉಳಿದಿವೆ. ಕರ್ನಾಟಕ ಹೈಕೋರ್ಟ್ ಆದೇಶದ ಪ್ರಕಾರ ಕಟ್ಟಡ ಕಾರ್ಮಿಕರಿಗೆ ವಸ್ತು ರೂಪದಲ್ಲಿ ಸಾಮಗ್ರಿಗಳನ್ನು ವಿತರಿಸುವ ಬದಲು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಮಾಡಬೇಕಾಗಿದ್ದರೂ, ಮಂಡಳಿಯು ವಿವಿಧ ಕಿಟ್‌ಗಳ ಖರೀದಿಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸಂಗ್ರಹವಾಗಿರುವ ಸೆಸ್ ನಿಧಿಯನ್ನು ನೇರವಾಗಿ ಕಾರ್ಮಿಕರಿಗೆ ನೀಡುವ ಬದಲು ಗುತ್ತಿಗೆದಾರ–ರಿಗೆ ಲಾಭವಾಗುವ ರೀತಿಯಲ್ಲಿ ಬಳಸಲಾಗುತ್ತಿದೆ ಎಂಬ ಅನುಮಾನಗಳು ಕಾರ್ಮಿಕರಲ್ಲಿ ವ್ಯಕ್ತವಾಗಿವೆ.

ಇತ್ತೀಚೆಗೆ ವಿತರಿಸಲಾದ ಸೇಫ್ಟಿ ಕಿಟ್‌ಗಳು ಬಹುತೇಕ ಕಾರ್ಮಿಕರಿಗೆ ಉಪಯೋಗಕ್ಕೆ ಬಾರದಂತಿದ್ದು, ಈ ಕಿಟ್ ವಿತರಣೆಯ ಸಂದರ್ಭದಲ್ಲಿ ಲೇಬರ್ ಕಾರ್ಡ್‌ಗೆ ಲಿಂಕ್ ಆಗಿರುವ ಕಾರ್ಮಿಕರ ಮೊಬೈಲ್ ಸಂಖ್ಯೆಗಳು ಹಾಗೂ ಇತರೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ನಂತರ ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರದ ಸಿಬ್ಬಂದಿಗಳು ನೇರವಾಗಿ ಕಾರ್ಮಿಕರನ್ನು ಸಂಪರ್ಕಿಸಿ, "ಕಾರ್ಮಿಕ ಸಂಘಟನೆಗಳಿಗೆ ಹೋಗುವ ಅಗತ್ಯವಿಲ್ಲ, ನಾವೇ ನಿಮ್ಮ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳನ್ನು ಮಾಡಿಕೊಡುತ್ತೇವೆ" ಎಂದು ಹೇಳುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿಬರುತ್ತಿವೆ. ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ನಡೆಸಿ, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ರಚನೆಗೆ ಕಾರಣವಾದ ಕಾರ್ಮಿಕ ಸಂಘಟನೆಗಳನ್ನು ದುರ್ಬಲಗೊಳಿಸುವ ಹಾಗೂ ಕಾರ್ಮಿಕರಲ್ಲಿ ಗೊಂದಲ ಸೃಷ್ಟಿಸುವ ಇಂತಹ ಚಟುವಟಿ–ಕೆಗಳು ಕಾರ್ಮಿಕ ಚಳುವಳಿಯ ಹಿತಾಸಕ್ತಿಗೆ ವಿರುದ್ಧವಾಗಿವೆ.

ಆದ್ದರಿಂದ ಈ ಕುರಿತು ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ ಕಾರ್ಮಿಕರ ಅರ್ಜಿಗಳ ವಿಲೇವಾರಿ ಹಾಗೂ ಸೌಲಭ್ಯಗಳ ಮಂಜೂರಾತಿ ಕುರಿತು ನಿರಂತರ ದೂರುಗಳು ವ್ಯಕ್ತವಾಗುತ್ತಿದ್ದು, ಜಿಲ್ಲಾ ಎಕ್ಸಿಕ್ಯೂಟಿವ್ ಅಧಿಕಾರಿ ಹೇಮಂತ್ ಸಿಂಗ್ ಅವರ ಕಾರ್ಯವೈಖರಿ ಕು–ರಿತು ವ್ಯಾಪಕ ಅಸಮಾಧಾನ ವ್ಯಕ್ತವಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಐಟಿಯು ಸಂಯೋಜಿತ)ಜಿಲ್ಲಾ ಅಧ್ಯಕ್ಷ ಕಾಸಿಂ ಸರ್ದಾರ್.ಕಟ್ಟಡ ಕಾರ್ಮಿಕರ ಸಂಘಟನೆ (ಐ.ಎಫ್.ಟಿ.ಯು. ಸಂಂ–ಯೋಜಿತ),ಜಿಲ್ಲಾ ಅಧ್ಯಕ್ಷ ತುಕಾರಾಂ ಪಾತ್ರೋಟಿ.

ಕರ್ನಾಟಕ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕ ಸಂಘ (ರಿ)(ಎ.ಐ.ಯು.ಟಿ.ಯು.ಸಿ. ಸಂಂ–ಯೋಜಿತ), ಜಿಲ್ಲಾ ಅಧ್ಯಕ್ಷ ಶರಣು ಗಡ್ಡಿ. ಭಾರತೀಯ ಕಾರ್ಮಿಕ ಸಂಘಟನೆಗಳ ಒಕ್ಕೂಟ (ಐ.ಎಫ್.ಟಿ.ಯು.) ಜಿಲ್ಲಾ ಮುಖ್ಯ ಸಂಚಾಲಕ ಬಸವರಾಜ್ ಶೀಲವಂತರ್. ಜಿಲ್ಲಾ ಸಂಚಾಲಕ ಎಸ್.ಎ.ಗಫಾರ್.ಎನ್.ಸಿ.ಎಲ್. ಜಿಲ್ಲಾ ಮುಖಂಡ ಮಹದೇವಪ್ಪ ಮಾವಿನಮಡು. ಕೊಳಚೆ ನಿರ್ಮೂಲನಾ ವೇದಿಕೆಯ ಸಂಚಾಲಕ ಗಾಳೆಪ್ಪ ಮುಂಗೋಲಿ. ಮಖಬೂಲ್ ರಾಯಚೂರು. ಆದಿತ್ಯ ಟಿ.ಪಾತ್ರೋಟಿ ಮುಂತಾದವರು ಇದ್ದರು. ವೈದ್ಯಕೀಯ ಸಹಾಯಧನವನ್ನು ಪೂರ್ಣ ಮೊತ್ತಕ್ಕೆ ಅನುಗುಣವಾಗಿ ವಿತರಿಸಬೇಕು.

ಬಾಕಿ ಇರುವ ಮದುವೆ ಸಹಾಯಧನ, ಹೆರಿಗೆ ಭತ್ಯೆ, ಪಿಂಚಣಿ ಹಾಗೂ ಮರಣ ಪರಿಹಾರ ಅರ್ಜಿಗಳನ್ನು ತಕ್ಷಣ ವಿಲೇವಾರಿ ಮಾಡಿ, ಬಾಕಿ ಇರುವ ಪಿಂಚಣಿ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಕೂಡಲೇ ಪಿಂಚಣಿ ಮಂಜೂರು ಮಾಡಬೇಕು, ಉಚಿತ ಆರೋಗ್ಯ ತಪಾಸಣಾ ಬಸ್ ಟೆಂಡರ್ ಪ್ರಕ್ರಿಯೆಯನ್ನು ತಕ್ಷಣ ರದ್ದುಪಡಿಸಿ, ಆ ಹಣವನ್ನು ನೇರವಾಗಿ ಕಾರ್ಮಿಕರ ಆರೋಗ್ಯ ಹಾಗೂ ವೈದ್ಯಕೀಯ ನೆರವಿಗೆ ಬಳಸಬೇಕು, ಐದು ವರ್ಷಗಳಿಗಿಂತ ಹೆಚ್ಚು ಕಾಲ ನೋಂದಾಯಿತವಾಗಿರುವ ಕಟ್ಟಡ ಕಾರ್ಮಿಕರಿಗೆ ಮನೆ ನಿರ್ಮಾಣ–ಕ್ಕಾಗಿ ಕನಿಷ್ಠ ?5 ಲಕ್ಷ ಸಹಾಯಧನ ನೀಡಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ಟ್ರೇಡ್ ಯೂನಿಯನ್ ಸಂಘಟನೆಗಳ ಮುಖಂಡರು, ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಭಾಗವಹಿಸುವ ಕಟ್ಟಡ ಕಾರ್ಮಿಕರ ಕುಂದುಕೊರತೆ ಸಭೆಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ನಡೆಸಬೇಕು ಮೇಲಿನ ಎಲ್ಲಾ ನ್ಯಾಯಸಮ್ಮತ ಬೇಡಿಕೆಗಳನ್ನು ಮುಂದಿನ 15 ದಿನಗಳೊಳಗಾಗಿ ಈಡೇರಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಸಾವಿರಾರು ಕಟ್ಟಡ ಕಾರ್ಮಿಕರನ್ನು ಸಂಘಟಿಸಿ ಜುಲೈ ಮೊದಲ ವಾರದಲ್ಲಿ ಜಿಲ್ಲಾ ಕಾರ್ಮಿಕ ಇಲಾಖೆಯ ಕಚೇರಿ ಎದುರು ಅನಿರ್ದಿಷ್ಟಾವಧಿ ಹಗಲು–ರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

## ಪ್ರಮುಖ ಬೇಡಿಕೆಗಳು

**ಕಟ್ಟಡ ಕಾರ್ಮಿಕರು ವಿವಿಧ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು, ಜಿಲ್ಲೆಯ ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರವನ್ನು ತಕ್ಷಣ ರದ್ದುಪಡಿಸಬೇಕು, ಕಟ್ಟಡ ಕಾರ್ಮಿಕರ ಹೆಸರಿನಲ್ಲಿ ನಡೆಯುತ್ತಿರುವ ಎಲ್ಲಾ ರೀತಿಯ ಕಿಟ್ ಖರೀದಿಗಳನ್ನು ತಕ್ಷಣ ನಿಲ್ಲಿಸಬೇಕು, ಅದರ ಬದಲಿಗೆ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಹಣ ಜಮಾ ಮಾಡಬೇಕು, ಕಟ್ಟಡ ಕಾರ್ಮಿಕರ ಮಕ್ಕಳಿಗೆ ಸಾಮಗ್ರಿ ವಿತರಣೆ ಬದಲಾಗಿ, ಆ ಹಣವನ್ನು ಅರ್ಹ ಕಟ್ಟಡ ಕಾರ್ಮಿಕರ ಮಕ್ಕಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಮಾಡಬೇಕು, ಇತ್ತೀಚೆಗೆ ಸೇಫ್ಟಿ ಕಿಟ್ ವಿತರಣೆಯ ಸಂದರ್ಭದಲ್ಲಿ ಲೇಬರ್ ಕಾರ್ಡ್‌ಗೆ ಲಿಂಕ್ ಆಗಿರುವ ಕಾರ್ಮಿಕರ ಮೊಬೈಲ್ ಸಂಖ್ಯೆಗಳು ಹಾಗೂ ಮಾಹಿತಿಯನ್ನು ಸಂಗ್ರಹಿಸಿ, ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರದ ಸಿಬ್ಬಂದಿಗಳು, ಕಾರ್ಮಿಕ ಸಂಘಟನೆಗಳನ್ನು ದುರ್ಬಲಗೊಳಿಸುವ ಹಾಗೂ ಕಾರ್ಮಿಕರಲ್ಲಿ ಗೊಂದಲ ಸೃಷ್ಟಿಸುವ ಚಟುವಟಿಕೆಗಳನ್ನು ತಕ್ಷಣ ನಿಲ್ಲಿಸಿ, ಹೊಣೆಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, 2023–24, 2024–25 ಹಾಗೂ 2025–26ನೇ ಸಾಲಿನ ಬಾಕಿ ಇರುವ ಎಲ್ಲಾ ಶೈಕ್ಷಣಿಕ ಸಹಾಯಧನ ಹಾಗೂ ಪ್ರತಿಭಾ ಪುರಸ್ಕಾರ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡಬೇಕು.**

# ಕೇಂದ್ರ ಸಚಿವ ಸ್ಥಾನಕ್ಕೆ ಹೆಚ್‌ಡಿಕೆ ಗುಡ್ ಬೈ..? ರಾಜ್ಯ ರಾಜಕಾರಣವೇ ಶಾಶ್ವತ?

ಅ.ಶ. ಸುದ್ದಿ ಮೈಸೂರು

**ಮೈಸೂರು: ಜೆಡಿಎಸ್ ಪಕ್ಷದಲ್ಲಿರುವ ಹಿತಶತ್ರುಗಳು ಯಾರೆಂಬುದನ್ನು ಪತ್ತೆ ಮಾಡಬೇಕಿತ್ತು ಆ ಕಾರಣಕ್ಕಾಗಿ ನಮ ಶಾಸಕರ ಪಕ್ಷ ನಿಷ್ಠೆಯ ಪರೀಕ್ಷೆಗಾಗಿಯೇ ವಿಧಾನಪರಿಷತ್ ಚುನಾವಣೆಗೆ ನಮ್ಮ ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಲಾಗಿತ್ತು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನಪರಿಷತ್ ಚುನಾವಣೆ ಫಲಿತಾಂಶದಿಂದ ಎಲ್ಲಾ ಸಂದೇಹಗಳಿಗೂ ಉತ್ತರ ದೊರೆತಿದೆ. ಜೊತೆಗೆ ಯಾರನ್ನೂ ಅತಿಯಾಗಿ ನಂಬಬಾರದು ಎಂಬ ಪಾಠವನ್ನು ಫಲಿತಾಂಶ ಕಲಿಸಿದೆ. ಚುನಾವಣೆಯಲ್ಲಿ ನಮ್ಮ ಪಕ್ಷದ ಯಾವ ಶಾಸಕರು ಅಡ್ಡಮತದಾನ ಮಾಡಿದ್ದಾರೆ ಎಂಬ ಸಂಪೂರ್ಣ ಮಾಹಿತಿಯೂ ಇದೆ ಎಂದರು.**



ಶಾಸಕರು ಯಾವ ಕಾರಣ–ಕ್ಕಾಗಿ ಅಡ್ಡಮತದಾನ ಮಾಡಿದ್ದಾರೆಂಬುದು ಗೊತ್ತಿದೆ. ಪಕ್ಷ ತೊರೆಯುವ ಹಂತದವರೆಗೂ ಚರ್ಚೆ ಮಾಡಿ ಅವರು ಅಡ್ಡಮತದಾನ ಮಾಡಿದ್ದಾರೆ. ಪಕ್ಷ ತೊರೆದು ಹೋಗುವವರು ಹೋಗಲಿ, ಪಕ್ಷವನ್ನು ಸಂಘಟಿಸುವುದು ಹೇಗೆ ಎಂಬುದು ಗೊತ್ತಿದೆ. ಯುವಕರ ಮೂಲಕ ಪಕ್ಷವನ್ನು ಪುನರ್ ಸಂಘಟನೆ ಮಾಡುವುದಾಗಿ ಹೇಳಿದರು.

ಕೇಂದ್ರದಲ್ಲಿರುವುದು ತಾತ್ಕಾಲಿಕ : ಕೇಂದ್ರ ಸರ್ಕಾರದಲ್ಲಿ ಸಚಿವನಾಗಿರುವುದು ತಾತ್ಕಾಲಿಕ. ನನಗೆ ರಾಜ್ಯ ರಾಜಕಾರಣವೇ ಶಾಶ್ವತ. ಹೊಸದಾಗಿ ರಾಜ್ಯ ರಾಜಕಾರಣ–ಕ್ಕೆ ಬರಬೇಕಾಗಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನ ಸಹಿಯನ್ನು ಮಾರಾಟಕ್ಕೆ ಇಟ್ಟಿರಲಿಲ್ಲ. ನನ್ನ ಹಳೆಯ ಸ್ನೇಹಿತರು ಏನೇನೋ ಆಪಾದನೆ ಮಾಡುತ್ತಿದ್ದಾರೆ. ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಪ್ಲೇವಿನ್‌ನಂತಹ ಲಾಟರಿ ನಿಷೇಧ ಮಾಡುವ ಸಂದರ್ಭದಲ್ಲಿ ಕೋಟ್ಯಂತರ ಆಫರ್ ನೀಡಿ ಹೋಟೆಲ್‌ನಲ್ಲಿ ಹಣ ತಂದು ಇಟ್ಟುಕೊಂಡಿದ್ದರು. ಅದನ್ನೆಲ್ಲಾ ನಾನು ಜನರ ಹಿತಕ್ಕಾಗಿ ಧಿಕ್ಕರಿಸಿದ್ದೇನೆ ಎಂದು ಸ್ಪಷ್ಟಪಡಿಸಿದರು. ವಿಧಾನಪರಿಷತ್ ಹಾಗೂ ವಿಧಾನಸಭೆಗೆ ಕೆಲವರಿಗೆ ಟಿಕೆಟ್ ನೀಡಿದಾಗ ಅವರಿಂದ ಪಕ್ಷಕ್ಕೆ ದೇಣಿಗೆ ಪಡೆದಿದ್ದೇನೆಯೇ ಹೊರತು ವೈಯಕ್ತಿಕ ಲಾಭಕ್ಕಾಗಿ ಪಕ್ಷದ ಟಿಕೆಟ್ ಮಾರಿಕೊಂಡಿಲ್ಲ ಎಂದು ಹೇಳಿದರು. ಮುಗಿದ ಕಥೆ : ಮಾಜಿ ಸಚಿವ ಹಾಗೂ ಶಾಸಕ ಜಿ.ಟಿ.ದೇವೇಗೌಡರ ಹೆಸರನ್ನು ಪ್ರಸ್ತಾಪಿಸಬೇಡಿ.

# ವಿದ್ಯಾರ್ಥಿಗಳಲ್ಲಿ ದೈವಭಕ್ತಿ, ದೇಶಭಕ್ತಿ ಬೆಳೆಸುವುದು ಇಂದಿನ ಅಗತ್ಯ: ಪೇಜಾವರ ಶ್ರೀಗಳ ಆಶೀರ್ವಚನ



ಅ.ಶ. ಸುದ್ದಿ ಶಿಡ್ಲಘಟ್ಟ

**ಶಿಡ್ಲಘಟ್ಟ: ವಿದ್ಯಾರ್ಥಿಗಳಲ್ಲಿ ವಿದ್ಯೆಯೊಂದಿಗೆ ದೈವ ಭಕ್ತಿ ಮತ್ತು ದೇಶಭಕ್ತಿಯನ್ನು ಕಲಿಸುವುದು ಇಂದಿನ ಕಾಲಘಟ್ಟದಲ್ಲಿ ಅತ್ಯಗತ್ಯವಾಗಿದೆ. ಶಿಕ್ಷಣ ಸಂಸ್ಥೆಗಳು ಹಾಗೂ ಶಿಕ್ಷಕರು ಈ ನಿಟ್ಟಿನಲ್ಲಿ ಹೆಚ್ಚಿನ ಗಮನ ಹರಿಸಿ ಕಾರ್ಯೋನ್ಮುಖರಾಗಬೇಕು ಎಂದು ಉಡುಪಿ ಪೇಜಾವರ ಮಠದ ಶ್ರೀ ಶ್ರೀ ವಿಭುದೇಶ ತೀಥ–**ರ್ ಸ್ವಾಮೀಜಿಯವರು ಆಶೀರ್ವಚನ ನೀಡಿದರು.

ನಗರದ ಪ್ರತಿಷ್ಠಿತ ಶ್ರೀ ವಾಸವಿ ವಿದ್ಯಾಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಕ್ಷರಾಭ್ಯಾಸ' ಮತ್ತು 'ಮಾತೃ ಭೋಜನ' ಕಾರ್ಯಕ್ರಮಗಳನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಖಾಸಗಿ ವಿದ್ಯಾಸಂಸ್ಥೆಗಳ ಪದಾಧಿಕಾ–



ರಿಗಳನ್ನು ಆಶೀರ್ವದಿಸಿ ಅವರು ಮಾತನಾಡಿದರು. ಆಧುನಿಕ ಜಗತ್ತಿನಲ್ಲಿ ಆಗುತ್ತಿರುವ ತೀವ್ರ ಬದಲಾವಣೆಗಳನ್ನು ಗಮನಿಸಿದಾಗ, ಕೇವಲ ಅಂಕ ಆಧಾರಿತ ವಿದ್ಯೆಗೆ ಮಾತ್ರವಲ್ಲದೆ ಉತ್ತಮ ಸಂಸ್ಕಾರಕ್ಕೂ ಆದ್ಯತೆ ನೀಡಬೇಕಿದೆ. ವಿದ್ಯಾರ್ಥಿಗಳಿಗೆ ನಮ್ಮ ಸಂಸ್ಕೃತಿಯೊಂದಿಗೆ ದೇಶಭಕ್ತಿಯನ್ನು ಬೋಧಿಸುವ ಮಹತ್ತರವಾದ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ.

ರಾಷ್ಟ್ರದ ಉತ್ತಮ ಹಾಗೂ ಸುಸಂಸ್ಕೃತ ಪ್ರಜೆಗಳನ್ನು ನಿರ್ಮಾಣ ಮಾಡುವ ಇಂತಹ ಪವಿತ್ರವಾದ ಅವಕಾಶ ಸಿಕ್ಕಿರುವುದು ದೈವ ಸಂಕಲ್ಪವಾಗಿದೆ. ಇದನ್ನು ಶಿಕ್ಷಕರು ಮತ್ತು ಸಂಸ್ಥೆಗಳು ಸದುಪಯೋಗ ಪಡಿಸಿಕೊಳ್ಳಬೇಕು" ಎಂದು ಶ್ರೀಗಳು ಕರೆ ನೀಡಿದರು. ಕಾರ್ಯಕ್ರಮದ ಆರಂಭದಲ್ಲಿ ಗೋಮಾತೆ, ಭಾರತ ಮಾತೆ ಹಾಗೂ ಸರಸ್ವತಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಗಳು ದೀಪ ಬೆಳಗಿಸುವ ಮೂಲಕ *ಚಿಕ್ಕಬಳ್ಳಾಪುರ ಜಿಲ್ಲಾ ಮಾಧ್ಯಮಿಕ ಶಿಕ್ಷಕರ ಸಂಘ*ವನ್ನು ಅಧಿಕೃತವಾಗಿ ಉದ್ಘಾಟಿಸಿದರು. ವೇದ ಪಂಡಿತರಾದ ದಾಶರಥಿ, ಸತ್ಯನಾರಾಯಣ ರಾವ್, ಶ್ರೀವತ್ಸ ಭಟ್ಟಾಚಾರ್ಯ ಹಾಗೂ ಪ್ರಸಿದ್ಧ ಚಿಂತಕ ಅರಳುಮಲ್ಲಿಗೆ ಹರೀಶ್ ಬಾಬು ಅವರು ಅಕ್ಷರಾಭ್ಯಾಸ ಮತ್ತು ಮಾತೃಭೋಜನದ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ವದ ಕು–ರಿತು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟರು.

ಕಾರ್ಯಕ್ರಮದಲ್ಲಿ ಜಿಲ್ಲಾ ಖಾಸಗಿ ವಿದ್ಯಾಸಂಸ್ಥೆಗಳ ಒಕ್ಕೂಟದ ಪದಾಧಿಕಾರಿಗಳು, ವಾಸವಿ ವಿದ್ಯಾಸಂಸ್ಥೆಯ ಅಧ್ಯಕ್ಷ ಮಹೇಶ್ ಬಾಬು, ಆಡಳಿತಾಧಿಕಾರಿ ರೂಪಸಿ ರಮೇಶ್, ಶಿವಕುಮಾರ್, ಆಡಳಿತ ಮಂಡಳಿಯ ಟಿ. ಎಸ್.ಕೆ.ಎಲ್. ಬಾಬು, ವಿ.ಎಸ್. ರಾಜೇಶ್, ವೇಣುಗೋಪಾಲ್ ಪಾಲ್ಗೊಂಡಿದ್ದರು. ಹಾಗೆಯೇ ಖಾಸಗಿ ವಿದ್ಯಾಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರ ರೆಡ್ಡಿ, ಸಂಚಾಲಕ ತಮೀಮ್ ಅನ್ಸಾರಿ, ಡಾಲ್ಫಿನ್ ವಿದ್ಯಾಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿ ಅಶೋಕ್ ಸೇರಿದಂತೆ ಹಲವು ಗಣ್ಯರು, ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜೂನ್ 27ಕ್ಕೆ ವಿಜೃಂಭಣೆಯ ನಾಡಪ್ರಭು ಕೆಂಪೇಗೌಡ ಜಯಂತಿ: ಜಿಲ್ಲಾಧಿಕಾರಿ ಜಿ.ಪ್ರಭು

ಅ.ಶ. ಸುದ್ದಿ ಚಿಕ್ಕಬಳ್ಳಾಪುರ

**ಚಿಕ್ಕಬಳ್ಳಾಪುರ: ಇದೇ ಜೂನ್ 27 ರಂದು ನಗರದ ಕನ್ನಡ ಭವನದಲ್ಲಿ ನಾಡಪ್ರಭು ಕೆಂಪೇಗೌಡ ಅವರ ಜಯಂತಿಯನ್ನು ಸಂಭ್ರಮ ಸಡಗರದಿಂದ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಪ್ರಭು ಅವರು ತಿಳಿಸಿದರು.**

ಇಲ್ಲಿನ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕೆಂಪೇಗೌಡ ಜಯಂತಿ ಅಂಗವಾಗಿ ಶುಕ್ರವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಜೂನ್ 27 ರಂದು ಬಿ.ಬಿ ರಸ್ತೆಯ ರಂಗನಾಥಸ್ವಾಮಿ ದೇವಾಲಯದ ಮುಂಭಾಗದಿಂದ ಕನ್ನಡ ಭವನದವರೆಗೆ ಪಲ್ಲಕ್ಕಿ ಮತ್ತು ಜಾನಪದ ಕಲಾ ತಂಡಗಳೊಂದಿಗೆ ಅದ್ದೂರಿ ಮೆರವಣಿಗೆ ನಡೆಯಲಿದೆ. ಮೆರವಣಿಗೆ ಮಧ್ಯದಲ್ಲಿ ನಗರದ ಒಕ್ಕಲಿಗರ ಕಲ್ಯಾಣ ಮಂಟಪದ ಮುಂಭಾಗದಲ್ಲಿರುವ ಶ್ರೀ ಕೆಂಪೇಗೌಡರ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮ ನಡೆಯಲಿದೆ. ಆ ನಂತರ ವೇದಿಕೆ ಕಾರ್ಯಕ್ರಮಗಳು ಜರುಗಲಿವೆ ಎಂದು ತಿಳಿಸಿದರು.



ವೇದಿಕೆ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡರ ವಿಚಾರಧಾರೆಗಳ ಕು–ರಿತು ಭಾಷಣ, ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರಗತಿಪರ ರೈತರಿಗೆ ಸನ್ಮಾನ ಮಾಡಲಾಗುವುದು. ಈ ಕಾರ್ಯಕ್ರಮಕ್ಕೆ ಆಹ್ವಾನ ಪತ್ರಿಕೆ ಮುದ್ರಣ, ವಿತರಣೆ, ವೇದಿಕೆ ಸಿದ್ಧತೆ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಕಲಾತಂಡಗಳೊಂದಿಗೆ ಮೆರವಣಿಗೆ, ಸಾಧಕರ ಆಯ್ಕೆ ಸೇ–ರಿದಂತೆ ಕಾರ್ಯಕ್ರಮ ಆಯೋಜನೆಗೆ ಅಗತ್ಯ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲು ಅಧಿಕಾ–ರಿಗಳಿಗೆ ಇಲಾಖಾವಾರು ಕಾರ್ಯಭಾರ ಹಂಚಿಕೆ ಮಾಡಿ ಜವಾಬ್ದಾರಿ ವಹಿಸಿದರು.

ಜಯಂತ್ಯೋತ್ಸವಕ್ಕೆ ಯಾವುದೇ ಲೋಪವಾಗದಂತೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ಸಂಬಂಧ ಪಟ್ಟ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ ನೀಡಿದರು. ಜಿಲ್ಲೆಯ ಸಮಸ್ತ ನಾಗರಿಕರು, ಸಮುದಾಯದ ಮುಖಂಡರು, ಪದಾಧಿಕಾರಿಗಳು, ಸರ್ಕಾರೇತರ ಸಂಸ್ಥೆಗಳ ಮುಖಂಡರು, ಪದಾಧಿಕಾ–ರಿಗಳು, ರೈತಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಸಭೆಯಲ್ಲಿ ರಾಜ್ಯ ಬೀಜ ನಿಗಮದ ಅಧ್ಯಕ್ಷ ಎಂ. ಆಂಜಿನಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾ ಅಧ್ಯಕ್ಷ ಎನ್. ರಮೇಶ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅತಿಕ್ ಪಾಷಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಕುಮಾರ, ತಾಲ್ಲೂಕು ಒಕ್ಕಲಿಗರ ಸಂಘ ಅಧ್ಯಕ್ಷ ಪಿ.ಎನ್. ಕೇಶವರೆಡ್ಡಿ, ಸಮುದಾಯದ ಮುಖಂಡರಾದ ಕೆ.ವಿ.ನಾಗರಾಜ್, ಗೋಪಾಲಗೌಡ ಕಲ್ಪಮಂಜಲಿ, ಕ್ರೀಡಾಪಟು ಮಂಚನಬೆಲೆ ಶ್ರೀನಿವಾಸ್, ಚಿನ್ನಪ್ಪರೆಡ್ಡಿ, ವೈ.ಎಲ್.ರಾಮಚಂದ್ರರೆಡ್ಡಿ, ಜನಾರ್ಧನ್ ಮೂರ್ತಿ ಹಾಗೂ ಒಕ್ಕಲಿಗ ಸಮುದಾಯದ ಸಂಘ ಸಂಸ್ಥೆಗಳ ಮುಖ್ಯಸ್ಥರು, ಪದಾಧಿಕಾ–ರಿಗಳು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

# ಭಾರತೀಯ ಮಹಿಳಾ ಕ್ರಿಕೆಟ್ ತಂಡದಿಂದ ಹೊರಬಿದ್ದ ಕನ್ನಡತಿ ಶ್ರೇಯಾಂಕಾ ಪಾಟೀಲ್

ಅ.ಶ. ಸುದ್ದಿ ಲೀಡ್ಸ

**ಲೀಡ್ಸ: ಮಹಿಳಾ ಟಿ20 ವಿಶ್ವಕಪ್ ಸಂದರ್ಭದಲ್ಲೇ ಭಾರತೀಯ ಮಹಿಳಾ ತಂಡದಲ್ಲಿ ಸ್ಥಾನ ಪಡೆದಿದ್ದ ಕನ್ನಡತಿ ಶ್ರೇಯಾಂಕಾ ಪಾಟೀಲ್ ತಂಡದಿಂದ ಹೊರಬಿದ್ದಿದ್ದಾರೆ. ತಂಡದಲ್ಲಿ ಯಶಸ್ವಿ ಆಫ್–ಸ್ಪಿನ್ನರ್ ಆಗಿದ್ದ ಶ್ರೇಯಾಂಕಾ ಪಾಟೀಲ್ ಪಾದದ ಗಾಯದಿಂದಾಗಿ ನಡೆಯುತ್ತಿರುವ ಮಹಿಳಾ ಟಿ20 ವಿಶ್ವಕಪ್‌ನಿಂದ ಹೊರಗುಳಿದಿದ್ದಾರೆ, ಅವರ ಬದಲಿಯಾಗಿ ಲೆಗ್‌ಸ್ಪಿನ್ನರ್ ಪ್ರೇಮಾ ರಾವತ್ ಅವರನ್ನು ಹೆಸರಿಸಲಾಗಿದೆ.**

ನೆದರ್ಲ್ಯಾಂಡ್?ಸ ವಿರುದ್ಧ ಭಾರತ 95 ರನ್‌ಗಳ ಜಯ ಸಾಧಿಸಿದ ಸಂದರ್ಭದಲ್ಲಿ 23 ವರ್ಷದ ಪಾಟೀಲ್ ಗಾಯಗೊಂಡರು. ಪವರ್‌ಪ್ಲೇನ ಅಂತಿಮ ಓವರ್‌ನಲ್ಲಿ ಪಾಟೀಲ್ ಚೆಂಡನ್ನು ನಿಲ್ಲಿಸಲು ಪ್ರಯತ್ನಿಸುವಾಗ ಅವರ ಪಾದವನ್ನು ತಿರುಚಿದಾಗ ಈ ಘಟನೆ ಸಂಭವಿಸಿದೆ. ವೈದ್ಯಕೀಯ ತಂಡ ಮೈದಾನಕ್ಕೆ



ಧಾವಿಸುವಾಗ ಅವರು ತಕ್ಷಣ ತಮ್ಮ ಬಲಗಾಲನ್ನು ಗಾಯಗೊಂಡ ಪಾದದ ಮೇಲೆ ಯಾವುದೇ ಭಾರವನ್ನು ಹಾಕಲು ಸಾಧ್ಯವಾಗದೆ ಹಿಡಿದುಕೊಂಡಿರುವುದು ಕಂಡುಬಂದಿದೆ. ಪಾಟೀಲ್ ಕೇವಲ ಒಂದು ಎಸೆತವನ್ನು ಎಸೆದ ನಂತರ ಸ್ಟ್ರೆಚರ್ ಮೂಲಕ ಹೊರಹಾಕಲಾಯಿತು.ಐಸಿಸಿ ಮಹಿಳಾ ಟಿ20 ವಿಶ್ವಕಪ್ 2026 ರ ಈವೆಂಟ್ ತಾಂತ್ರಿಕ ಸಮಿತಿಯು ಪ್ರೇಮಾ ರಾವತ್ ಅವರನ್ನು ಭಾರತ ತಂಡದಲ್ಲಿ ಶ್ರೇಯಾಂಕಾ ಪಾಟೀಲ್ ಬದಲಿಗೆ ಅನುಮೋದಿಸಿದೆ ಎಂದು ಐಸಿಸಿ ಮಾಧ್ಯಮ ಪ್ರಕಟಣೆ ತಿಳಿಸಿದೆ.

24 ವರ್ಷದ ರಾವತ್ ಹಿರಿಯ ರಾಷ್ಟ್ರೀಯ ತಂಡಕ್ಕೆ ತಮ್ಮ ಮೊದಲ ಕರೆಯನ್ನು ಗಳಿಸಿದ್ದಾರೆ. ಅವರು ಮಹಿಳಾ ಪ್ರೀಮಿಯರ್ ಲೀಗ್‌ನ ಎರಡು ಋತುಗಳಲ್ಲಿ ಆಡಿದ್ದಾರೆ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆರು ಪಂದ್ಯಗಳನ್ನು ಆಡಿದ್ದಾರೆ. ನಾಳೆ ನಾರ್ಥಾಂಪ್ಟನ್‌ನಲ್ಲಿ ನಡೆಯುವ ಮೊದಲ ಟಿ20 ಪಂದ್ಯದಿಂದ ಪ್ರಾರಂಭವಾಗುವ ಆರು ಪಂದ್ಯಗಳ ವೈಟ್–ಬಾಲ್ ಸರಣಿಗಾಗಿ ಇಂಗ್ಲೆಂಡ್ ಪ್ರವಾಸ ಮಾಡಲು ನಿಗದಿಯಾಗಿದ್ದ ಭಾರತ ಎ ತಂಡದ ಭಾಗವಾಗಿದ್ದರು ರಾವತ್.

ರೈಸಿಂಗ್ ಸ್ಟಾರ್ಸ್ ಮಹಿಳಾ ಏಷ್ಯಾ ಕಪ್‌ನಲ್ಲೂ ಅವರು ಪ್ರಭಾವ ಬೀರಿದ್ದರು, ಭಾರತ ಎ ಪ್ರಶಸ್ತಿಯನ್ನು ಗೆದ್ದಾಗ 4.27 ರ ಎಕಾನಮಿ ದರದಲ್ಲಿ ಎಂಟು ವಿಕೆಟ್‌ಗಳನ್ನು ಕಬಳಿಸಿದರು.ಇತ್ತೀಚಿನ ವರ್ಷಗಳಲ್ಲಿ ಗಾಯಗಳೊಂದಿಗೆ ಪಾಟೀಲ್ ಅವರ ದುರದೃಷ್ಟಕರ ಓಟವನ್ನು ಈ ಹಿನ್ನಡೆ ಮುಂದುವ–ರಿಸಿದೆ. ಜುಲೈ 2024 ರಲ್ಲಿ ಮುರಿದ ಬೆರಳು ಆ ವರ್ಷದ ಟಿ20 ವಿಶ್ವಕಪ್‌ನಿಂದ ಅವರನ್ನು ಹೊರಗುಳಿಸಿತು. ನಂತರ ಅವರು ಮಣಿಕಟ್ಟಿನಲ್ಲಿ ಒತ್ತಡದ ಪ್ರತಿಕ್ರಿಯೆಯನ್ನು ಅನುಭವಿಸುವ ಮೊದಲು ಎರಡೂ ಕಾಲುಗಳಲ್ಲಿ ಮೊಣಕಾಲಿನಲ್ಲಿ ನೋವು ಅನುಭವಿಸಿದರು, ಇದು ಅವರ ವೃತ್ತಿಜೀವನದ ಗಾಯದಿಂದ ಬಳಲುತ್ತಿರುವ ಹಂತದಲ್ಲಿ ಮತ್ತೊಂದು ನಿರಾಶಾದಾಯಕ ಹೊಡೆತವಾಗಿದೆ.

# ಲೇಖಕರ ದಿನಚರಿ...

# ಜ್ಞಾನ ಜ್ಯೋತಿ ಭಗವಾನ್ ಬುದ್ಧ

**ಭಗವಾನ್ ಬುದ್ಧನು ಜಗತ್ತಿನ ಮಹಾನ್ ಚೇತನ,ಸದಾ ಪ್ರಕಾಶಿಸುವ ಜಗದ ಬೆಳಕು,ಜಗತ್ತಿಗೇ ಜ್ಞಾನವನ್ನು ಉಣಬಡಿಸಿದ ಜ್ಞಾನ ಜ್ಯೋತಿ.**

**ಜನನ ಮತ್ತು ಜೀವನ:**
ಗೌತಮ ಬುದ್ಧನು ಕಪಿಲ ವಸ್ತುವಿನ ಬಳಿಯಿರುವ ಲುಂಬಿನಿ ವನದಲ್ಲಿ " ವೈಶಾಖ ಶುದ್ಧ ಪೌರ್ಣಮಿ"ಯಂದು ಶುದ್ಧೋದನ ಮತ್ತು ಮಾಯಾದೇವಿಯ ಮಗನಾಗಿ ಜನಿಸುತ್ತಾನೆ. ಅವನಿಗೆ ಸಿದ್ಧಾರ್ಥ್ ಎಂದು ನಾಮಕರಣ ಮಾಡಲಾಯಿತು. "ಸಿದ್ಧಾರ್ಥ್ " ಎಂದರೆ' ತನ್ನ ಕಾರ್ಯದಲ್ಲಿ ಯಶಸ್ವಿಯಾದವನು 'ಎಂದಥ-ರ್ಾ.ಸಿದ್ಧಾರ್ಥ್ ಹುಟ್ಟಿ ಏಳು ದಿನಗಳಾದ ಮೇಲೆ ಮಾಯಾದೇವಿ ತೀರಿಕೊಳ್ಳುತ್ತಾಳೆ. ನಂತರ ಮಗುವಾಗಿರುವ ಸಿದ್ಧಾರ್ಥ್ ನನ್ನು ಅವನ ಎರಡನೇ ತಾಯಿ ಪ್ರಜಾಪತಿ ದೇವಿ ಗೌತಮಿಯು ಸಾಕಿ ಸಲಹುತ್ತಾಳೆ. ಇದರಿಂದಲೇ ಸಿದ್ಧಾರ್ಥ್ ಗೌತಮನೆಂದು ಕರೆಯಲು ಕಾರಣವಾಗುತ್ತದೆ.

ಸಿದ್ಧಾರ್ಥ್ ಜನಿಸಿದಾಗಲೇ ಅವನಲ್ಲಿ ಅಪೂರ್ವವಾದ ಮಹಾಪುರುಷನ ಲಕ್ಷಣಗಳು ಇರುವುದನ್ನು ಅರಿತ ರಾಜರ್ಷಿಗಳು ಈ ಶಿಶುವು ರಾಜ್ಯಾಭಿಷಕ್ತನಾದರೆ ಚಕ್ರಾಧೀಶ್ವರನೂ,ಸಂಪದ್ಭ-ರಿತನೂ ಆಗುವನು,ಇಲ್ಲವಾದರೆ ರಾಜವೈಭವವನ್ನು,ಅಧಿಕಾರವನ್ನು ತೊರೆದು ಯೋಗಿಯಾದರೇ , ಮಹಾಯೋಗಿಯೆನಿಸಿ ಜಗದ್ವಿಖ್ಯಾತ ವ್ಯಕ್ತಿಯಾಗುವನು ಎಂದು ಭವಿಷ್ಯವನ್ನು ನುಡಿಯುತ್ತಾರೆ. ಅಷ್ಟೇ ಅಲ್ಲದೆ "ಈ ನವಜಾತ ಶಿಶುವು ಇಡೀ ಜಗತ್ತಿಗೇ ಮುಕ್ತಿಯ ಮಾರ್ಗವನ್ನು ತೋರುವುದು ಎಂದು ಅಲೌಕಿಕ ಚಿಹ್ನೆಗಳು ಸಾರುತ್ತಿವೆ " ಎಂಬ ಎಚ್ಚರಿಕೆಯನ್ನೂ ಕೊಟ್ಟರು.

**ಸಂಸಾರ ಪರಿತ್ಯಾಗ ಸತ್ಯಾನ್ವೇಷಣೆ:**
ರಾಜರ್ಷಿಗಳ ಮಾತಿನಿಂದ ಭಯಭೀತನಾಗಿ ಗಾಬರಿಗೊಂಡ ಶುದ್ಧೋದನನು ಚಿಕ್ಕವಯಸ್ಸಿನಲ್ಲೇ ಸಿದ್ಧಾರ್ಥನಿಗೆ ಮದುವೆ ಮಾಡಿ ಕಷ್ಟದ ಅರಿವೇ ಆಗದಂತೆ ವೈಭವಯುತ, ಸುಖದಾಯಕ,ಆರಾಮದಾಯಕ ಜೀವನ ಕೊಟ್ಟ.ಆದರೆ ವಿಧಿ ಲಿಖಿತ ಬೇರೆಯೇ ಆಗಿ-ತ್ತು.ಸಿದ್ಧಾರ್ಥನು ಹೊರ ಪ್ರಪಂಚದ ಬಗ್ಗೆ ತಿಳಿದುಕೊಳ್ಳಲು ಉತ್ಸುಕನಾಗಿದ್ದನು. ಅವನು ತನ್ನ ಸಾಮ್ರಾಜ್ಯದಲ್ಲಿರುವ ನಗರವನ್ನು ನೋಡಲು ಹೋದಾಗ ಈ ಕೆಳಗಿನ ಸನ್ನಿವೇಶಗಳು ಮನಃ ಪರಿವರ್ತನೆಗೊಂಡು ಸಿದ್ಧಾರ್ಥ ಬುದ್ಧನಾಗಲು ಕಾರಣವಾದವು.


ಅವುಗಳೆಂದರೆ:
- **ಒಬ್ಬ ಮುದುಕನನ್ನು ನೋಡಿದ್ದು**
- **ಒಬ್ಬ ರೋಗಿಯನ್ನು ನೋಡಿದ್ದು**
- **ಒಂದು ಹೆಣವನ್ನು ನೋಡಿದ್ದು, ಕೊನೆಯದಾಗಿ**
- **ಒಬ್ಬ ಸನ್ಯಾಸಿಯನ್ನು ನೋಡಿದ್ದು.**

ಮೊದಲ ಮೂರು ದೃಶ್ಯಗಳು ಎಲ್ಲಾ ಭೂಮಿ ಮೇಲೆ ಹುಟ್ಟಿರುವ ಪ್ರತಿ ಜೀವಿಗಳಿಗೂ ಬರುವಂತಹ ಅವಸ್ಥೆಗಳಾಗಿವೆ.ಅವುಗಳು ಆಕಸ್ಮಿಕವಾದವುಗಳಲ್ಲ ಎಂದು ಮನಸ್ಸಿನಲ್ಲಿ ಅಂ-ದುಕೊಳ್ಳುತ್ತಾ ಖಿನ್ನ ಮನಸ್ಕನಾಗಿ ,ದುಃಖದಿಂದ ಚಿಂತಾಕ್ರಾಂತನಾಗಿ ಕುಳಿತು ಆಲೋಚಿಸುವಾಗ ಅವನ ಮುಂದೆ ಬಂದ ಸನ್ಯಾಸಿಯನ್ನು ನೋಡಿ ಅವನನ್ನು ಪ್ರಶ್ನಿಸುತ್ತಾನೆ.ಆಗ ಸನ್ಯಾಸಿಯು ಸಿದ್ಧಾರ್ಥನಿಗೆ – " ಜನನ – ಮರಣಗಳುಳ್ಳ ಪ್ರಪಂಚದಲ್ಲಿರುವ ಮಾನವನು ತಿಳಿದೂ ತಿಳಿದೂ ಕ್ಷಣಿಕ ಸುಖಕ್ಕಾಗಿ ಆಸೆ ಪಟ್ಟು,ಸಾಗರದಷ್ಟು ದುಃಖ ಪಡುತ್ತಿರುವುದನ್ನು ನೋಡಿ ಮನನೊಂದು ಅಲೆಮಾರಿಯಾಗಿ ಅಲೆಯುತ್ತಾ ನೆಮ್ಮದಿಯಾಗಿದ್ದೇನೆ. ಅಷ್ಟೇ ಅಲ್ಲ ನಾನು ಬಂಧು ಬಾಂಧವರು, ಸುಖ – ಸಂಪತ್ತುಗಳೆಂಬ ವ್ಯಾಮೋಹದಿಂದ ದೂರವಾದವನು.

ನನಗೆ ಕಷ್ಟ ಸುಖಗಳ ಬಗ್ಗೆ ಚಿಂತೆಯಿಲ್ಲ. ಸಿರಿತನದ ಬಗ್ಗೆ ಆಸೆಯಿಲ್ಲ. ನಾನು ಆತ್ಮ ಸ್ವತಂತ್ರನಾಗಿರುವೆ. ಭೂಮಿಯೇ ನನ್ನ ಮನೆ,ಆಕಾಶವೇ ನನಗೆ ಹೊದಿಕೆ. ಅನ್ಯರ ಹಂಗಿಲ್ಲದ ಈ ಅರಣ್ಯವೇ ನನ್ನ ವಾಸಸ್ಥಾನ" ಎಂದು ಹೇಳುತ್ತಾನೆ.ಸನ್ಯಾಸಿಯ ಈ ಮಾತುಗಳಿಂದ ಆಕರ್ಷಿತನಾದ ಸಿದ್ಧಾಥ-ರ್ನ ಮನಸ್ಸು ಸತ್ಯಾನ್ವೇಷಣೆಗೆ ಹೊರಡಲು ನಿರ್ಧಾರ ಮಾಡುತ್ತದೆ. ಈ ಘಟನೆ ಬುದ್ಧನಾಗಲು ಕಾರಣವಾಗುತ್ತದೆ. ನಗರದಿಂದ ಹಿಂತಿರುಗುತ್ತಿದ್ದಂತೆ ತನ್ನ ಹೆಂಡತಿ ಗಂಡು ಮಗುವಿಗೆ ಜನ್ಮವಿತ್ತ ಸುದ್ದಿ ತಿಳಿದು ಸ್ವತಃ ಸಿದ್ಧಾರ್ಥನೇ ಮಗನಿಗೆ ರಾಹುಲ ನೆಂದು ನಾಮಕರಣ ಮಾಡುತ್ತಾನೆ.. ಇದ-ರಿಂದ ಸಿದ್ಧಾರ್ಥ ಮತ್ತೂ ಚಿಂತಾಕ್ರಾಂತನಾಗುತ್ತಾನೆ.

"ಬಂಧನದ ಮೇಲೆ ಮತ್ತೊಂದು ಬಂಧನವನ್ನು ಹೇರಿದಂತಾಯಿತಲ್ಲ"

ಎಂದುಕೊಳ್ಳುತ್ತಾ ಸತ್ಯವನ್ನು ತಿಳಿಯುವುದಕ್ಕಾಗಿ ಮಧ್ಯರಾತ್ರಿಯಲ್ಲಿ ಎಲ್ಲವನ್ನೂ ತ್ಯಜಿಸಿ ಬುದ್ಧ ಗಯಾಕ್ಕೆ ಬಂದು ಸಿದ್ಧಾರ್ಥ್ ಒಂದು ಬೋಧಿವೃಕ್ಷ( ಅರಳಿ ಮರ) ದ ಕೆಳಗೆ ಸತ್ಯವನ್ನು ಅರಿಯಲೇಬೇಕೆಂಬ ದೃಢ ಸಂಕಲ್ಪವನ್ನು ಮಾಡಿ ಆರು ವರ್ಷಗಳ ಕಾಲ ಸಾಧನೆಗೈದು ಸಿದ್ಧಾಥ-ರ್ ವೈಶಾಖ ಶುದ್ಧ ಪೂರ್ಣಿಮೆಯಂದು ತನ್ನೆಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡು



,ಜ್ಞಾನೋದಯವನ್ನು ಗಳಿಸಿ "ಸತ್ಯವನ್ನು ಕಂಡು" " ತಥ-ಾಗತ" ನಾದ, ಬುದ್ಧನಾದ.ಹೊಸ ಧರ್ಮದ ಪ್ರವರ್ತಕನಾದ. ಬುದ್ಧ ಎಂದರೆ– " ನಿದ್ದೆಯಿಂದ ಎದ್ದವನು,ಜಾಗೃತನಾದವ,ಜ್ಞಾನಿ,ವಿಕಸಿತ, ಎಲ್ಲವನ್ನೂ ತಿಳಿದವನು "ಎಂದರ್ಥ. ಬೌದ್ಧ ಧರ್ಮದಲ್ಲಿ ಕೋಪ,ಲೋಭ,ಮೌಢ್ಯತೆ'ಗಳನ್ನು ಸಂಪೂರ್ಣವಾಗಿ ಜಯಿಸಿದವನನ್ನು "ಬುದ್ಧ" ಎಂದು ಕರೆಯುತ್ತಾರೆ.ಬುದ್ಧನ ಜನನ,ಜ್ಞಾನೋದಯ ಹಾಗೂ ಮರಣ ಎಲ್ಲಾ ಸಂಭವಿಸಿದ್ದು ಇದೇ ವೈಶಾಖ ಶುದ್ಧ ಪೂರ್ಣಿಮೆಯ ದಿನ ಎನ್ನುವುದು ವಿಶೇಷ. **ಬುದ್ಧನ ಬೋಧನೆಗಳು, ನಾಲ್ಕು ಆರ್ಯ ಸತ್ಯಗಳು:** ಬುದ್ಧನು ತನ್ನ ಬೋಧನೆಗಳಿಂದ ಜಗತ್ತಿಗೇ ಬೆಳಕಾಗಿದ್ದಾನ',ಆದರ್ಶಪ್ರಾಯನಾಗಿದ್ದಾನೆ.ಅವನ ಬೋಧನೆಯ ಮುಖ್ಯ ಉದ್ದೇಶ ಜಗತ್ತನ್ನು ದುಃಖದಿಂದ ಮುಕ್ತಗೊಳಿಸುವುದು.

**❂ ಪ್ರಾಪಂಚಿಕ ಜೀವನವು ದುಃಖಮಯವಾಗಿದೆ:**
ಈ ಪ್ರಪಂಚವು ದುಃಖದಿಂದ ಕೂಡಿದೆ.ಅದಕ್ಕೆ ಕಾರಣ ಸುಖಕ್ಕಾಗಿ ಬೆನ್ನಟ್ಟಿ ಹೋಗುವುದು.

ಅಂಥ ಸುಖ ನಮಗೆ ಸಿಗದೇ ಇದ್ದಾಗ ಸ್ವಾಭಾವಿಕವಾಗಿ ಮನಸ್ಸು ದುಃಖಿಗೊಳ್ಳುತ್ತದೆ. ಆದ್ದರಿಂದ ದುಃಖದಿಂದ ತಪ್ಪಿಸಿಕೊಳ್ಳುವುದೇ ಮಾನವನ ಗುರಿಯಾಗಬೇಕೆಂದು ಬುದ್ಧನು ಬೋಧಿಸಿದನು. ವಾಸ್ತವಿಕ ಅರಿವಿನ ಸ್ಥಿತಿಯಲ್ಲಿರುವ ಮನುಷ್ಯನೇ ಹೆಚ್ಚು ಸುಖಿಯಾಗಿರುತ್ತಾನೆ.ಕ್ಷಣಿಕ ಸುಖಕ್ಕಾಗಿ ಸಾಗರದಷ್ಟು ದುಃಖಪಡುವುದು ಸರಿಯಲ್ಲ.ಅದರಿಂದ ಹೊರ ಬರಬೇಕು. ನಿಜವಾದ ಸಂತೋಷ,ಐಶ್ವರ್ಯ ಇರುವುದು ನಮ್ಮೊಳಗೆ ಹೊರತು ಹೊರ ಜಗತ್ತಿನಲ್ಲಿ ಸಿಗುವಂಥದಲ್ಲ. ಎಷ್ಟೇ ಹೊರಜಗತ್ತಿನಲ್ಲಿ ಪ್ರಾಪಂಚಿಕ ಸುಖವನ್ನು ಕಂಡುಕೊಂಡರೂ ಸಹ ನಿಜವಾದ ತೃಪ್ತಿ ಅದ-ರಿಂದ ಸಿಗುವುದಿಲ್ಲ.ಅದು ಸಿಗುವುದು ನಮ್ಮ ಒಳಮನಸ್ಸಿನ ಸಂತೋಷದಿಂದ. ಇದನ್ನು ನಾವು ಅರಿತಾಗ ಮಾತ್ರ ಪ್ರಾಪಂಚಿಕ ಜೀವನದ ದುಃಖದಿಂದ ಹೊರ ಬರಲು ಸಾಧ್ಯವಾಗುತ್ತದೆ.

**❂ಆಸೆಯೇ ದುಃಖಕ್ಕೆ ಮೂಲ ಕಾರಣ:**
ನಮ್ಮಲ್ಲಿ ಏನಿದೆಯೋ ಅದರಲ್ಲಿ ತೃಪ್ತಿ ಪಟ್ಟುಕೊಳ್ಳದೇ ಇನ್ನೂ ಬೇಕು ,ಮತ್ತಷ್ಟೂ ಬೇಕು ಎನ್ನುವ ಆಸೆಯ ಮನಸ್ಥಿತಿಯಿಂದ ನೆಮ್ಮದಿ ಸಿಗದೆ ಒದ್ದಾಡುತ್ತೇವೆ.ಆಗ ಅದು ದುಃಖಕ್ಕೆ ಕಾರಣವಾಗುತ್ತದೆ. ಆದ್ದರಿಂದ ಆಸೆಯೇ ದುಃಖಕ್ಕೆ ಮೂಲ ಕಾರಣ ಎಂದು ಹೇಳಿರುವುದು.ಆಸೆಯಿಂದ ಹೊರಬರಲು ನಾವು ಪ್ರಯತ್ನಿಸಬೇಕು.

**❂ ಆಸೆಯನ್ನು ನಿಗ್ರಹಿಸುವುದರಿಂದ ದುಃಖ ನಿವಾರಣೆ ಸಾಧ್ಯ:** ನಾವು ನಮ್ಮ ಜೀವನದಲ್ಲಿ ನೆಮ್ಮದಿಯಾಗಿರಬೇಕೆಂದರೆ ,ಮೊದಲು ಆಸೆಯನ್ನು ನಿಗ್ರಹಿಸಬೇಕು,ನಾವು ಎಷ್ಟು ಪಡೆದುಕೊಂಡಿದ್ದೇವೆಯೋ ,ನಮ್ಮ ಭಾಗ್ಯದಲ್ಲಿ ಎಷ್ಟು ಸಿಗಬೇಕೆಂದು ಬರೆದಿದೆಯೋ ಅಷ್ಟರಲ್ಲೇ ತೃಪ್ತಿ ಪಟ್ಟುಕೊಂಡರೆ ದುಃಖದಿಂದ ಹೊರಬಂದು ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗುತ್ತದೆ. ಆಸೆಯೇ ಇಲ್ಲವೆಂದರೆ ದುಃಖಿಯಾಗುವ ಪ್ರಸಂಗವೇ ಬರುವುದಿಲ್ಲ.

**❂ ಆಸೆ– ಆಕಾಂಕ್ಷೆಗಳನ್ನು ತೊರೆಯಲು ಅಷ್ಟಾಂಗ ಮಾರ್ಗಗಳನ್ನು ಅನುಸರಿಸಬೇಕು:** ಜ್ಞಾನೋದಯಕ್ಕೆ ನಿಜವಾದ ಮಾರ್ಗ ಎಂದರೆ ನಮ್ಮ ಆಸೆ ಅಥವಾ ಬಯಕೆಗಳನ್ನು ನಮ್ಮಿಂದ ತೊರೆಯಲು ಅವಕಾಶ ಕೊಡಬೇಕು. ಅವುಗಳನ್ನು ನಿಗ್ರಹಿಸಬೇಕು. ಆಸೆ ಇಟ್ಟುಕೊಂಡು ಜ್ಞಾನೋದಯಕ್ಕೆ ಪ್ರಯತ್ನಿಸುವವನು ನಿಜವಾದ ಮೂರ್ಖ ಎಂದು ಬುದ್ಧನು ಹೇಳಿದನು. ಆಸೆ ಆಕಾಂಕ್ಷೆಗಳನ್ನು ತೊರೆದಾಗ ಮಾತ್ರ ವ್ಯಕ್ತಿ ಪರಿಪೂರ್ಣ ವ್ಯಕ್ತಿಯಾಗುತ್ತಾನೆ. ಅಂತಹ ವ್ಯಕ್ತಿ ಮೋಕ್ಷ ಸಾಧನೆಗೆ ಯೋಗ್ಯನಾಗಿರುತ್ತಾನೆ. ಮೋಕ್ಷಸಾಧನೆಗೆ ಸೂಕ್ತ ದಾರಿ ಕಲ್ಪಸುವ ಮಾರ್ಗವೇ ಅಷ್ಟಾಂಗ ಮಾರ್ಗ.

**ಅಷ್ಟಾಂಗ ಮಾರ್ಗ:**
ಬುದ್ಧನ ಪ್ರಕಾರ ಮುಕ್ತಿಗೆ ಕೊಂಡೊಯ್ಯಲಿರುವ ದಾರಿ ಎಂದರೆ ಅಷ್ಟಾಂಗ ಮಾರ್ಗ. ಬುದ್ಧನ ಮಧ್ಯಮ ಮಾರ್ಗ ಅಥವಾ ಅಷ್ಟಾಂಗ ಮಾರ್ಗಗಳು ಇಂದಿಗೂ ಮನುಕುಲಕ್ಕೆ ಮಾದ-ರಿಯಾಗಿವೆ. ಮೋಕ್ಷ ಸಾಧನೆಗೆ ಸಹಕಾ-ರಿಯಾಗಿವೆ ,ಅವುಗಳನ್ನು ನಾವು ತಿಳಿದುಕೊಂಡು ಅಳವಡಿಸಿಕೊಳ್ಳುವುದು ಅತೀ ಅವಶ್ಯಕ ..ಅವುಗಳೆಂದರೆ

- **ಸಮ್ಯಕ್ ದೃಷ್ಟಿ**
- **ಸಮ್ಯಕ್ ಸಂಕಲ್ಪ**
- **ಸಮ್ಯಕ್ ವಚನ**
- **ಸಮ್ಯಕ್ ಕರ್ಮ**
- **ಸಮ್ಯಕ್ ಜೀವನ**
- **ಸಮ್ಯಕ್ ವ್ಯಾಯಾಮ**
- **ಸಮ್ಯಕ್ ಸಂಸ್ಕೃತಿ**
- **ಸಮ್ಯಕ್ ಸಮಾಧಿ**

**● ಸಮ್ಯಕ್ ದೃಷ್ಟಿ:**
ಮನುಷ್ಯನ ಆಸೆಗಳಿಗೆ ಕೊನೆಯಿಲ್ಲ. ಮನುಷ್ಯನ ಕೊನೆಯಿಲ್ಲದ ಬೇಡಿಕೆಗಳು ,ಲೋಭ ,ದುರಾಸೆ ಮತ್ತು ಸ್ವಾರ್ಥ ಇವುಗಳನ್ನು ನಿರಾಕರಿಸುವುದರ ಮೂಲಕ ನಾವು ಕಂಡುಕೊಳ್ಳಬಹುದಾದ ಮನಸ್ಸಿನ ಶಾಂತಿಯ ಮಾರ್ಗ ಇದಾಗಿದೆ.

**● ಸಮ್ಯಕ್ ಸಂಕಲ್ಪ:**
ನಮ್ಮಲ್ಲಿ ಎಲ್ಲರಲ್ಲಿಯೂ ಒಳ್ಳೆಯ ಆಲೋಚನೆಗಳು, ಚಿಂತನೆಗಳು ಇದ್ದೇ ಇರುತ್ತವೆ.ಆದ-'ರೆ ನಾವು ಅವುಗಳನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ಪ್ರಯತ್ನ ಕೂಡಾ ಮಾಡುವುದಿಲ್ಲ. ಹಾಗಾಗಿಯೇ ಬುದ್ಧನು ಮನುಷ್ಯನಲ್ಲಿ ಕೇವಲ ಒಳ್ಳೆಯ ಚಿಂತನೆಗಳಿದ್ದರೆ ಸಾಲದು ,ಅವುಗಳನ್ನು ಅನುಷ್ಠಾನಕ್ಕೆ ತರುವಂತಹ ಸಂಕಲ್ಪವಿರಬೇಕು ಎಂದು ಹೇಳಿರುವುದು.

**● ಸಮ್ಯಕ್ ವಚನ:**
ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಲು ಬಳಸುವ ಭಾಷೆಯಲ್ಲಿ ಎಚ್ಚರವಿರಬೇಕು. ಬಸವಣ್ಣನವರು ಪ್ರತಿಪಾದಿಸಿದ " ಕಳಬೇಡ, ಕೊಲಬೇಡ, ಹುಸಿಯನುಡಿಯಲು ಬೇಡ " ವಚನದ ಸಾಲುಗಳು ಬುದ್ಧನ ಚಿಂತನೆಯನ್ನು ಪ್ರತಿಪಾದಿಸುತ್ತವೆ.ನಾವಾಡುವಮಾತುಗಳೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ .ಸುಳ್ಳಿನ ಮಾತುಗಳು ಮತ್ತು ಜಗಳಗಳಿಂದ ಸಂಬಂಧಗಳು ನಾಶವಾಗುತ್ತವೆ. ಸಮುದಾಯ, ಸಮಾಜದಲ್ಲಿ ತೊಂದರೆ ಅನುಭ'ವಿಸಬೇಕಾಗುತ್ತದೆ.ಹಿತಕರವಾದ ಮಾತುಗಳಿಂದ ಸ್ನೇಹ ಸಂಬಂಧಗಳು ಊರ್ಜಿತಗೊಳ್ಳುತ್ತವೆ.ಈ ಮೂಲಕ ನಾವಾಡುವ ಮಾತು ಮಾಣಿಕ್ಯದಂತಿ-ರಬೇಕೆಂದು ಬುದ್ಧನು ತುಂಬಾ ಚೆನ್ನಾಗಿ ತಿಳಿಸಿದ್ದಾನೆ.

**● ಸಮ್ಯಕ್ ಕರ್ಮ:**
ನಮ್ಮ ಕರ್ಮಗಳೇ ನಮ್ಮ ಒಳಿತು ,ಕೆಡಕುಗಳ ಮೂಲಗಳು. ವ್ಯಕ್ತಿ ತಾನು ಪಡೆದ ಶಿಕ್ಷಣ ಅಥ-'ವಾ ಜ್ಞಾನ ಇವುಗಳಿಂದ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ಇದು ಆತನ ಸದಭಿರುಚಿಯ ನಡುವಳಿಕೆಗೆ ಮಾರ್ಗವಾಗುವುದರ ಮೂಲಕ ಶಾಂತಿಯುತ ಸಮಾಜ ನಿರ್ಮಾಣವಾಗುವುದರ ಜೊತೆಗೆ ಆತನೊಳಗಿನ ಕೆಟ್ಟ ಗುಣಗಳು ನಾಶವಾಗುತ್ತವೆ ಎನ್ನುವುದು ಸಮ್ಯಕ್ ಕರ್ಮದ ಉದ್ದೇಶವಾಗಿದೆ.

**● ಸಮ್ಯಕ್ ಜೀವನ:**
ಮನುಷ್ಯನ ಬದುಕು ಹೇಗಿರಬೇಕೆಂದರೆ ಯಾವುದೇ ಜೀವಿಗೆ ನೋವು ಅಥ-'ವಾ ತೊಂದರೆಯನ್ನುಂಟು ಮಾಡದಂತಿ-ರಬೇಕು .ಸಮ್ಯಕ್ ಜೀವನದ ಮೂಲಕ ಮನುಷ್ಯ ಹಿಂಸೆಯನ್ನು ತೊರೆಯಬೇಕೆಂದು ಬುದ್ಧನು ಹೇಳಿದನು .ತಾನು ಬದುಕಿದ್ದ ಕಾಲಘಟ್ಟದ ಸಮಾಜದ ಹಿಂಸೆ, ದರೋಡೆ,ಇವುಗಳಿಂದ ನೊಂದು,ಮನುಷ್ಯ ಇತರರನ್ನು ದೋಚುವುದು ಇಲ್ಲವೇ ಶೋಷಿಸುವುದನ್ನು ತೊರೆದು ಶ್ರಮದ ಸೂತ್ರಗಳನ್ನು ವೈಯಕ್ತಿಕ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿರುವುದು ಅಕ್ಷರಶಃ ಸತ್ಯವಾಗಿದೆ,ಪ್ರಸ್ತುತ ಸಮಾಜಕ್ಕೆ ಬೇಕಾಗಿರುವು ಇದೇ ಆಗಿದೆ.

**● ಸಮ್ಯಕ್ ವ್ಯಾಯಾಮ:**
ಆರೋಗ್ಯವಂತ ಸಮಾಜ ನಿರ್ಮಾಣ-ಕ್ಕೆ ಇದು ಅವಶ್ಯಕ. ಇದು ವ್ಯಕ್ತಿಯ ಸ್ವ ತರಬೇತಿ ಮತ್ತು ಮನೋ ನಿಗ್ರಹಕ್ಕೆ ಪೂರಕವಾಗಿದೆ. ಉದ್ದೇಶಿತ ಗುರಿ ಸಾಧನೆಗೆ ಆರೋಗ್ಯ ಮುಖ್ಯ ಎಂದು ನಂಬಿದ್ದ ಬುದ್ಧನು ವ್ಯಾಯಾಮವನ್ನು ಪ್ರೋತ್ಸಾಹಿಸಿದನು.ಇದರ ಜೊತೆಗೆ ತನ್ನ ಶಿಷ್ಯ-ರಿಗೆ ಮತ್ತು ಪ್ರಜೆಗಳಿಗೆ ಸಾಮೂಹಿಕವಾಗಿ ವ್ಯಾಯಾಮದಲ್ಲಿ ತೊಡಗಿಸಿಕೊಳ್ಳುವುದು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯಕ್ಕೆ ಒಳ್ಳೆಯದೆಂದು ಬೋಧಿಸಿದನು.

**● ಸಮ್ಯಕ್ ಸಂಸ್ಕೃತಿ**
ಇದನ್ನು ಸದಾ ಎಚ್ಚರವಾಗಿರುವ,ಎಲ್ಲವನ್ನೂ ಗಮನಿಸುವ ಮನಸ್ಸು ಎಂದು ಹೇಳಬಹುದು. ಸರಿ ,ತಪ್ಪುಗಳನ್ನು ಇದರಿಂದ ತಿಳಿಯಲು ಸಾಧ್ಯವಾಗುತ್ತದೆ. ಬುದ್ಧನ ದೃಷ್ಟಿಕೋನದಲ್ಲಿ ಉತ್ತಮ ಆಲೋಚನಾ ಗುಣಗಳಿದ್ದಾಗ ಮಾತ್ರ ಸದುದ್ದೇಶಗಳು ಇರಲು ಸಾಧ್ಯ. ಇಂತಹ ಉದಾತ್ತ ಚಿಂತನೆಗಳು ಮನುಷ್ಯನನ್ನು ಸಂಘಜೀವಿ ಮಾಡುವುದಲ್ಲದೆ ಇದರಿಂದ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ ಎಂಬುದು ಆತನ ಬಲವಾದ ನಂಬಿಕೆಯಾಗಿತ್ತು.

**● ಸಮ್ಯಕ್ ಸಮಾಧಿ:**
ಇದು ಜೀವನದ ವಾಸ್ತವಾಂಶಗಳ ಕುರಿತು ಆಳವಾದ ಧ್ಯಾನ ಮಾಡಬಲ್ಲದ್ದಾಗಿದೆ. ಅಂ-ದರೆ ಪ್ರಾಪಂಚಿಕ ಸುಖ ಮತ್ತು ಭೋಗಗಳಿಂದ ವಿಮುಖನಾಗಿ ತನ್ನ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಾಗ ಮಾತ್ರ ಮನುಷ್ಯನಿಗೆ ಉಲ್ಲಾಸ ಅಥವಾ ನಿಜವಾದ ನೆಮ್ಮದಿ ದೊರೆಯಲು ಸಾಧ್ಯ. ತನ್ನ ಉಪದೇಶಗಳ ಮೂಲಕ ಸಮಾಜದಲ್ಲಿದ್ದ ಮೌಢ್ಯತೆ, ದ್ವೇಷಾಸೂಯೆ, ಕಂದಾಚಾರಗಳನ್ನು ಹೋಗಲಾಡಿಸಿ ಪ್ರೀತಿ, ಸತ್ಯ, ಸಹನೆ,ದಯೆ, ಕರುಣೆಯ ಸಂದೇಶದ ಮೂಲಕ ಜ್ಞಾನವನ್ನು ಉಣಬಡಿಸಿದ ಜ್ಞಾನ ಜ್ಯೋತಿ ಎನಿಸಿದ ಬುದ್ಧನ ಉಪದೇಶಗಳು ಸಾರ್ವಕಾಲಿಕ ಸತ್ಯಗಳಾಗಿವೆ. ಬುದ್ಧನ ಸಂದೇಶಗಳು ಮನುಕುಲಕೆ ದಾ-ರಿದೀಪವಾಗಿವೆ. ಸತ್ಯ ಉದಾತ್ತ ಹಾಗೂ ಮಧುರ. ಸತ್ಯವು ಕೆಡುಕಿನಿಂದ ನಿನ್ನನ್ನು ರಕ್ಷಿಸಬಲ್ಲದು.
#ಸಹೋದರರಂತೆ ಇರಿ.

ಪ್ರೀತಿಯಲ್ಲಿ ,ಪಾವಿತ್ರ್ಯದಲ್ಲಿ,ಸತ್ಯವೆಂಬ ಧ್ಯೇಯದಲ್ಲಿ ನೀವೆಲ್ಲಾ ಒಂದಾಗಿ.
#ಸತ್ಯವನ್ನು ಎಲ್ಲೆಡೆ ಹರಡಿ,ಆ ತತ್ವವನ್ನು ಜಗತ್ತಿನ ಎಲ್ಲೆಡೆ ಪ್ರಚಾರ ಮಾಡಿ.ಅದರಿಂದ ಎಲ್ಲಾ ಜೀವಿಗಳೂ ಧರ್ಮ ಸಾಮ್ರಾಜ್ಯದ ಪ್ರಜೆಗಳಾಗಿ ಬದುಕಬಹುದು.
#ನಿನ್ನ ದುಃಖಕ್ಕೆ ಕಾರಣ ಏನೇ ಆಗಿರಲಿ,ಇತರರನ್ನು ಮಾತ್ರ ನೋಯಿಸಬೇಡ.
#ಎಲ್ಲಾ ಜೀವಿಗಳ ಮೇಲೆ ದಯೆ ಇರುವುದು – ಇದೇ ನಿಜವಾದ ಧರ್ಮ. ನಿಜವಾದ ಧರ್ಮದ ವಿಶಿಷ್ಠವಾದ ಲಕ್ಷಣವೆಂದರೆ ಸದ್ಭಾವ ,ಪ್ರೀತಿ,ಸತ್ಯನಿಷ್ಠೆ,ಪರಿಶುದ್ಧತೆ ,ಉದಾತ್ತ ಚರಿತೆ ಹಾಗೂ ಕರುಣೆ.
#ದ್ವೇಷದಿಂದ ದ್ವೇಷವನ್ನು ನಾಶಗೊಳಿಸಲು ಸಾಧ್ಯವಿಲ್ಲ.

ಪ್ರೀತಿಯಿಂದ ಮಾತ್ರ ಅದು ನಾಶವಾಗುವುದು.
#ಎಲ್ಲಾ ಕರ್ಮಗಳ ಪೂರ್ವಭಾವಿ ರೂಪವೇ ಮನಸ್ಸು. ಮನಸ್ಸನ್ನು ನಿಗ್ರಹಿಸುವುದು ಕಷ್ಟ. ಅದು ಅತ್ಯಂತ ಸೂಕ್ಷ್ಮ, ಚುರುಕು ಹಾಗೂ ತಾನುವಾಲಿದಲ್ಲಿಗೆ ತಕ್ಷಣ ನೆಗೆಯುವಷ್ಟು ಚಂಚಲ ಅದನ್ನು ನಿಗ್ರಹಿಸುವುದು ಸೂಕ್ತ.ನಿಗ್ರಹಿಸಲ್ಪಟ್ಟ ಮನಸ್ಸು ಆನಂದವನ್ನು ತರುವುದು.ಕೆಡುಕನ್ನು ವಾಡದಿರುವುದು,ಸತ್ಕರ್ಮಗಳನ್ನು ಮಾಡುವುದು ತನ್ನ ಮನಸ್ಸಿನ ಶುದ್ಧೀಕರಣ –ಇದು ಬೌದ್ಧ ತತ್ವವಾಗಿದೆ.

ಹೀಗೆ ಪ್ರಸ್ತುತ ಸಮಾಜಕ್ಕೆ ಅತೀ ಅವಶ್ಯಕವಿರುವ ತತ್ವಗಳನ್ನು ಬುದ್ಧನು ಬೋಧಿಸಿದನು. ಬುದ್ಧನನ್ನು ಕುರಿತು ಸ್ವಾಮಿ ವಿವೇಕಾನಂದರು – ಕರ್ಮಯೋಗದ ವಿಚಾರಗಳನ್ನು ಅನುಷ್ಠಾನಕ್ಕೆ ತಂದ ಒಬ್ಬ ವ್ಯಕ್ತಿಯ ಕೆಲವು ನುಡಿಗಳನ್ನು ನಾನು ನಿಮಗೆ ಹೇಳಬಯಸುವೆ..

ಅವನೇ ಬುದ್ಧ. ಸಮರ್ಪಕವಾಗಿ ಈ ವಿಚಾರಗಳನ್ನು ಕಾರ್ಯರೂಪಕ್ಕೆ ತಂದವನು ಇವನೊಬ್ಬನೇ.ಬುದ್ಧನ ಹೊರತು ಬೇರೆಲ್ಲಾ ಪ್ರವಾದಿಗಳೂ ತಮ್ಮ ನಿಸ್ವಾರ್ಥ ಕ್ರಿಯೆಗೆ ಹೊರಗಿನ ಪ್ರಚೋದನೆ ಬೇಕಿತ್ತು. ಯಾವುದೇ ಅಪೇಕ್ಷೆಯಿಲ್ಲದ ಆದರ್ಶ ಕರ್ಮಯೋಗಿ ಈತ. ಮತ್ತಾರಿಗೂ ಹೋಲಿಸಲಾರದಂತಹ ಅತ್ಯದ್ಭುತ ಮಾನವನೆಂದು ಮಾನವತೆಯ ಇತಿಹಾಸವು ಸಾರುತ್ತಿದೆ.

ಹೃದಯ ಹಾಗೂ ಮಸ್ತಿಷ್ಕಗಳ ಅತ್ಯುತ್ತಮ ಸಮಾಗಮ ಹಾಗೂ ಚೈತನ್ಯ ಶಕ್ತಿಯ ಅಭಿವ್ಯಕ್ತಗಳಲ್ಲಿ ಇವನನ್ನು ಮೀರಿಸುವ ವ್ಯಕ್ತಿ ಹುಟ್ಟಿಲ್ಲ ಎಂದು ತುಂಬಾ ಅಮೋಘವಾಗಿ ಹೇಳಿರುವರು.
ಮೋಕ್ಷಸಾಧನೆಗೆ ಸಹಕಾರಿಯಾದ ,ಜಗತ್ತನ್ನೇ ಗೆದ್ದು,ತನ್ನ ಉಪದೇಶಗಳ ಮೂಲಕ ಅಂ-ಧಕಾರವನು ತೊಲಗಿಸಿ ಜ್ಞಾನ ಜ್ಯೋತಿಯನು ಬೆಳಗಿದ ಬುದ್ಧನು ಕೇವಲ 'ಏಷ್ಯಾ ಖಂಡದ ಜ್ಯೋತಿಯಲ್ಲ' ಅವನು 'ಇಡೀ ಜಗತ್ತಿನ ಜ್ಯೋತಿ' ಆಗಿರುವನು.

"ಬುದ್ಧಂ ಶರಣಂ ಗಚ್ಛಾಮಿ"
"ಧಮ್ಮಂ ಶರಣಂ ಗಚ್ಛಾಮಿ"
" ಸಂಘಂ ಶರಣಂ ಗಚ್ಛಾಮಿ".



ಸುಮಿತ್ರಾ ಕೋಳೂರು, ಧಾರವಾಡ

# ಅಪ್ಪಾಜಿ ನಾಡಗೌಡರಿಗೆ ಸಚಿವ ಸ್ಥಾನಕ್ಕಾಗಿ ಆಗ್ರಹಿಸಿ ಪ್ರತಿಭಟನೆ ; ಸಾಮೂಹಿಕ ರಾಜೀನಾಮೆ ಎಚ್ಚರಿಕೆ

**ಅ.ಶ. ಸುದ್ದಿ ಮುದ್ದೇಬಿಹಾಳ**

**ಮುದ್ದೇಬಿಹಾಳ: ಹಿರಿಯ ಮುತ್ಸದ್ದಿ ರಾಜಕಾರಣಿ, ಶಾಸಕ ಸಿ.ಎಸ್. ನಾಡಗೌಡ (ಅಪ್ಪಾಜಿ) ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನ ನೀಡಬೇಕೆಂದು ಆಗ್ರಹಿಸಿ ಶುಕ್ರವಾರ ಹಮ್ಮಿಕೊಂಡಿದ್ದ 'ಮುದ್ದೇಬಿಹಾಳ ಬಂದ್' ಕರೆಗೆ ಸಾರ್ವಜನಿಕರು ಹಾಗೂ ವರ್ತಕ–ರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದ್ದು, ಬಂದ್ ಸಂಪೂರ್ಣ ಯಶಸ್ವಿಯಾಯಿತು. ?ಶಾಸಕರ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಅಭಿಮಾನಿಗಳು ಹಮ್ಮಿಕೊಂಡಿದ್ದ ಈ ಪ್ರತಿಭಟನೆಯಿಂದಾಗಿ ಪಟ್ಟಣದಲ್ಲಿ ವ್ಯಾಪಾರ ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು. ಅಂಗಡಿ ಮುಂಗಟ್ಟುಗಳು ಮುಚ್ಚಿದ್ದವು. ಸರ್ಕಾರಿ ಬಸ್ ಸೇವೆ ಸೇರಿದಂತೆ ಖಾಸಗಿ ವಾಹನಗಳ ಸಂಚಾರವೂ ಸಂಪೂರ್ಣ ಬಂದ್ ಆಗಿತ್ತು.**

ಪಟ್ಟಣದ ಶ್ರೀ ಬನಶಂಕರಿ ದೇವಾಲಯದಿಂದ ಆರಂಭವಾದ ಬೃಹತ್ ಪ್ರತಿಭಟನಾ ಮೆರವಣಿಗೆಯು ಬಸವೇಶ್ವರ ವೃತ್ತದವರೆಗೆ ಸಾಗಿತು. ಮೆರವಣಿಗೆಯುದ್ದಕ್ಕೂ ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಕಾರ್ಯಕರ್ತರು, "ಅಪ್ಪಾಜಿ ನಾಡಗೌಡ–ರಿಗೆ ಮಂತ್ರಿ ಸ್ಥಾನ ನೀಡಲೇಬೇಕು" ಎಂದು ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು. ಬಸವೇಶ್ವರ ವೃತ್ತದಲ್ಲಿ ಟೈಯರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರು,



ಗಾಂಧಿ ಟೋಪಿ ಧರಿಸಿ ಗಮನ ಸೆಳೆದರು. 'ಸಚಿವ ಸ್ಥಾನ ನೀಡದಿದ್ದರೆ ಸಾಮೂಹಿಕ ರಾಜೀನಾಮೆ' ಮುಖಂಡರ ಎಚ್ಚರಿಕೆ; ?ಬಸವೇಶ್ವರ ವೃತ್ತದಲ್ಲಿ ಸೇರಿದ ಸಾವಿರಾರು ಅಭಿಮಾನಿಗಳನ್ನು ಹಾಗೂ ಕಾರ್ಯಕರ್ತರನ್ನು ಉದ್ದೇಶಿಸಿ ಕಾಂಗ್ರೆಸ್ ಪಕ್ಷದ ಪ್ರಮುಖ ಮುಖಂಡರಾದ ?ವೈ. ಎಚ್. ವಿಜಯಕರ್, ಬಿ. ಎಸ್. ಪಾಟೀಲ ಯಾಳಗಿ, ಬಿ. ಕೆ. ಬಿರಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಬಾಪುರಾವ ದೇಸಾಯಿ, ಮಹಿಬೂಬ ಗೊಳಸಂಗಿ: "ವಿಜಯಪುರ ಜಿಲ್ಲೆಯಲ್ಲಿ ಒಂದು ಕಾಲದಲ್ಲಿ ಕಾಂಗ್ರೆಸ್ ಹೆಸರೇ ಇರಲಿಲ್ಲ. ಮುದ್ದೇಬಿಹಾಳ ಕ್ಷೇತ್ರ ಸೇರಿದಂತೆ ಎಲ್ಲೆಡೆ ಜನತಾದಳ ಇತ್ತು. ಆದರೆ ಅಪ್ಪಾಜಿ ನಾಡಗೌಡರು ಕಾಂಗ್ರೆಸ್ ಸೇರಿದ ಮೇಲೆ ಇಲ್ಲಿ ಪಕ್ಷ ಬಲವರ್ಧನೆಗೊಂಡಿತು.

ನಾಡಗೌಡರ ಸಂಭಾವಿತನವನ್ನು ಪಕ್ಷ ದುರುಪಯೋಗಪಡಿಸಿಕೊಳ್ಳುತ್ತಿದೆ. ಅವರಿಗೆ ಸಿಗಬೇಕಾದ ಹಕ್ಕನ್ನು ಕಸಿದುಕೊಳ್ಳಬೇಕಿದೆ. ಅನೇಕ ದಿಗ್ಗಜ ನಾಯಕರು ನೀಡಿದ್ದ ಭರವಸೆಯನ್ನು ಮರೆತಿದ್ದಾರೆ. ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಅವರಿಗೆ ಸಚಿವ ಸ್ಥಾನ ನೀಡದಿದ್ದರೆ ಕ್ಷೇತ್ರದ ಮುಖಂಡರೆಲ್ಲರೂ ಸಾಮೂಹಿಕ ರಾಜೀನಾಮೆ ನೀಡಲಿದ್ದೇವೆ. ಮುಂದಿನ 2028ರ ಚುನಾವಣೆಯಲ್ಲಿ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ" ಎಂದು ಎಚ್ಚರಿಸಿದರು. ಶಿವಶಂಕರಗೌಡ ಹಿರೇಗೌಡರ, ಸುರೇಶಗೌಡ ಪಾಟೀಲ, ರೋಷನ್ ಡೋಣಿ, ಶಕೀಲ್ ಅಹ್ಮದ್ ಖಾಜಿ, ಕಾಂಗ್ರೆಸ್ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಅಕ್ಷತ ಚಲವಾದಿ, ಸರಸ್ವತಿ ಪೀರಾಪೂರ ಮಾತನಾಡಿ "ಹಿರಿಯ ಮುತ್ಸದ್ದಿ ನಾಯಕನಿಗೆ ಸಚಿವ ಸ್ಥಾನ ಯಾಕೆ ನೀಡುತ್ತಿಲ್ಲ ಎನ್ನುವುದು ಯಕ್ಷಪ್ರಶ್ನೆಯಾಗಿದೆ. ಅವರಿಗೆ ಸಚಿವ ಸ್ಥಾನ ನೀಡಿದರೆ ವಿಜಯಪುರ ಮತ್ತು ಬಾಗಲಕೋಟೆ ಎರಡೂ ಜಿಲ್ಲೆಗಳಲ್ಲಿ ಪಕ್ಷ ಮತ್ತಷ್ಟು ಬಲವಾಗುತ್ತದೆ. ಕಾರ್ಯಕರ್ತರ ಸಹನೆ ಈಗ ಕಟ್ಟೆ ಒಡೆದಿದೆ. ನ್ಯಾಯ ಸಿಗದಿದ್ದರೆ ಬೆಂಗಳೂ–ರಿಗೆ ಬಂದು ಪ್ರತಿಭಟನೆ ನಡೆಸುತ್ತೇವೆ" ಎಂದರು.

?ರಾಜೀನಾಮೆ ಘೋಷಿಸಿದ ರಫೀಕ್ ಶಿರೋಳ: ಅಪ್ಪಾಜಿ ನಾಡಗೌಡರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಮುಖಂಡ ರಫೀಕ್ ಶಿರೋಳ ಅವರು ತಮ್ಮ ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡುವುದಾಗಿ ವೇದಿಕೆಯಲ್ಲೇ ಘೋಷಿಸಿದರು. ?ಈ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಸಂಗನಗೌಡ ಬಿರಾದಾರ (ಜಿಟಿಸಿ), ಗಣೇಶ್ ಅನ್ನಗೌನಿ, ಕಾಮರಾಜ ಬಿರಾದಾರ, ಶ್ರೀಕಾಂತ ಚಲವಾದಿ, ಸಿಕಂದರ್ ಜಾನ್ವೇಕರ, ಟಿ. ವಿಜಯಭಾಸ್ಕರ್, ಹುಸೇನ್ ಮುಲ್ಲಾ, ಸಂಗಣ್ಣ ಮೇಲಿನಮನಿ, ಪಿಂಟು ಸಾಲಿಮನಿ, ಅಮರೇಶ ಗೂಳಿ, ಯಲ್ಲಪ್ಪ ಚಲವಾದಿ, ಶರಣು ದೇಗಿನಾಳ, ಪ್ರೀತಿ ದೇಗಿನಾಳ, ಮಾಬೂಬಿ ಬಾಗವಾನ, ಹೀನಾ ಮೂಲಿಮನಿ, ವಿರೇಶ ಹಡಲಗೇರಿ, ಶಿವು ಶಿವಪುರ, ಶರಣು ಚಲವಾದಿ, ಚಿನ್ನು ನಾಡಗೌಡ, ಅಪ್ಪು ನಾಡಗೌಡ,ಪ್ರದೀಪ ನಾಡಗೌಡ, ಬಸವರಾಜ ಗೋನಾಳ, ಲಕ್ಷ್ಮಣ ಲಮಾಣಿ ಸೇರಿದಂತೆ ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲ್ಲೂಕಿನ ವಿವಿಧ ಗ್ರಾಮಗಳ ಸಾವಿರಾರು ಸಂಖ್ಯೆಯ ಕಾರ್ಯಕರ್ತರು, ಮಹಿಳೆಯರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

?ಸಾರ್ವಜನಿಕರ ಪರದಾಟ ? ಬಿಗಿ ಪೊಲೀಸ್ ಬಂದೋಬಸ್ತ್ ?ಬಂದ್ ಹಿನ್ನೆಲೆಯಲ್ಲಿ ಬೆಳಗ್ಗಿನಿಂದಲೇ ಅಂಗಡಿಗಳು ಹಾಗೂ ಸಾರಿಗೆ ಸಂಪೂರ್ಣ ಬಂದ್ ಆಗಿದ್ದರಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತೀವ್ರ ಪರದಾಡುವಂತಾಯಿತು. ಹೋಟೆಲ್‌ಗಳು ಮುಚ್ಚಿದ್ದ–ರಿಂದ ಪ್ರಯಾಣಿಕರು ಊಟ, ತಿಂಡಿಗಾಗಿ ತೊಂದರೆ ಅನುಭವಿಸಿದರು. ಆಸ್ಪತ್ರೆಗೆ ಬಂದ ರೋಗಿಗಳು ನಡೆದುಕೊಂಡೇ ಸಾಗಬೇಕಾಯಿತು. ಪರಿಸ್ಥಿತಿಯನ್ನು ನಿಯಂತ್ರಿಸಲು ಡಿವೈಎಸ್ಪಿ ಚಂದ್ರಕಾಂತ ನಂದರೆಡ್ಡಿ ನೇತೃತ್ವದಲ್ಲಿ ಭಾರಿ ಪೊಲೀಸ್ ಬಿಗಿ ಬಂದೂಬಸ್ತ್ ಕಲ್ಪಿಸಲಾಗಿತ್ತು. ಸಂಜೆ 4 ಗಂಟೆಯ ನಂತರ ಸಾರಿಗೆ ಬಸ್ ಸಂಚಾರ ಯಥಾಸ್ಥಿತಿಗೆ ಮರಳಿತು.

## ಮೋದಿಯನ್ನು ಫ್ರಾನ್ಸ್ ಪ್ರೀತಿಸುತ್ತದೆ; ಮ್ಯಾಕ್ರನ್

**ಅ.ಶ. ಸುದ್ದಿ ಪ್ಯಾರಿಸ್**

**ಪ್ಯಾರಿಸ್: ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಿಂದಿಯಲ್ಲಿ ವಿದಾಯ ವೀಡಿಯೊ ಪೋಸ್ಟ್ ಮಾಡಿ, ಅವರನ್ನು ಆತ್ಮೀಯ ಸ್ನೇಹಿತ ಎಂದು ಕರೆದು ಫ್ರಾನ್?ಸ ನಿಮ್ಮನ್ನು ಪ್ರೀತಿಸುತ್ತದೆ ಎಂದು ಸೇರಿಸಿದ್ದಾರೆ.**



ಪ್ರಿಯಾ ಮಿತ್ರ ನರೇಂದ್ರ, ಮುಜೆ ಬಹುತ್ ಖುಷಿ ಹೈ ಆಪ್ ಕಾ ನೈಸ್, ಎವಿಯನ್ ಔರ್ ಪ್ಯಾರಿಸ್, ದೌರೆ ಕೆ ಲಿಯೇ ಸ್ವಾಗತ್ ಕರ್ತೆ, ಫ್ರಾನ್?ಸ ಭಾರತ್ ಕಿ ದೋಸ್ತಿ ಅಮರ್ ರಹೇ (ಆತ್ಮೀಯ ಸ್ನೇಹಿತ ನರೇಂದ್ರ, ನೈಸ್, ಎವಿಯನ್ ಮತ್ತು ಪ್ಯಾರಿಸ್ ಪ್ರವಾಸದಲ್ಲಿ ನಿಮ್ಮನ್ನು ಸ್ವಾಗತಿಸಲು ನನಗೆ ತುಂಬಾ ಸಂತೋಷವಾಗಿದೆ ಮತ್ತು ಫ್ರಾನ್?ಸ ಮತ್ತು ಭಾರತದ ನಡುವಿನ ಸ್ನೇಹ ಶಾಶ್ವತವಾಗಿರಲು ನಾನು ಬಯಸುತ್ತೇನೆ) ಎಂದು ಹೇಳಿದರು. https://twitter.com/EmmanuelMacron/status/2067658731483955261/video/1 ಫ್ರಾನ್ಸ್ ಅಧ್ಯಕ್ಷರು ಪ್ರಧಾನಿ ಮೋದಿ ಅವರ ಭೇಟಿಗೆ ಧನ್ಯವಾದಗಳನ್ನು ಅರ್ಪಿಸಿದರು ಮತ್ತು ಅದನ್ನು ಬಹಳ ಫಲಪ್ರದ ಎಂದು ಬಣ್ಣಿಸಿದರು, ಫೆಬ್ರವರಿಯಲ್ಲಿ ಅವರನ್ನು ಮತ್ತೆ ಭೇಟಿಯಾಗುವ ಭರವಸೆಯನ್ನು ವ್ಯಕ್ತಪಡಿಸಿದರು.ನಿಮ್ಮ ಭೇಟಿಗೆ ಧನ್ಯವಾದಗಳು. ನಮ್ಮ ಸ್ನೇಹಕ್ಕೆ ಧನ್ಯವಾದಗಳು. ಇದು ತುಂಬಾ ಫಲಪ್ರದ ಭೇಟಿಯಾಗಿತ್ತು. ಫ್ರಾನ್?ಸ ನಿಮ್ಮನ್ನು ಪ್ರೀತಿಸುತ್ತದೆ. ಫೆಬ್ರವ–ರಿಯಲ್ಲಿ ಶೀಘ್ರದಲ್ಲೇ ನಿಮ್ಮನ್ನು ಮತ್ತೆ ನೋಡಲು ನಾವು ಎದುರು ನೋಡುತ್ತಿದ್ದೇವೆ. ಜೈ ಹಿಂದ್ ಎಂದಿದ್ದಾರೆ. ಜೂನ್ 13 ರಂದು ಮೋದಿ ಮೆಡಿಟರೇನಿಯನ್ ನಗರವಾದ ನೈಸ್‌ಗೆ ಆಗಮಿಸಿದರು, ಅಲ್ಲಿ ಅವರು ಮ್ಯಾಕ್ರನ್ ಜೊತೆಗೆ ಭಾರತ್ ಇನ್ನೋವೇಟ್?ಸ ಕಾರ್ಯಕ್ರಮವನ್ನು ಉದ್ಘಾಟಿಸಿದರು ಮತ್ತು ಫ್ರೆಂಚ್ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಸಭೆಯನ್ನೂ ನಡೆಸಿದರು.ಜೂನ್ 14 ರಿಂದ 16 ರವರೆಗೆ ಅವರು ಸ್ಲೋವಾಕಿಂ–ದಾಗೆ ಭೇಟಿ ನೀಡಿದರು, ಭಾರತೀಯ ಪ್ರಧಾನಿಯೊಬ್ಬರು ಮೊದಲ ಬಾರಿಗೆ ಸ್ಲೋವಾಕಿಯಾಕ್ಕೆ ಭೇಟಿ ನೀಡಿದರು.

ಮಂಗಳವಾರ ಮತ್ತು ಬುಧವಾರ ನಡೆದ ಜಿ7 ಶೃಂಗಸಭೆಗಾಗಿ ಮೋದಿ ಫ್ರೆಂಚ್ ಸಮುದಾಯವಾದ ಎವಿಯನ್–ಲೆಸ್–ಬೈನ್?ಸನಲ್ಲಿದ್ದರು, ಇದಕ್ಕೆ ಭಾರತವನ್ನು ಅತಿಥಿ ರಾಷ್ಟ್ರವಾಗಿ ಆಹ್ವಾನಿಸಲಾಯಿತು.

# ಶಸ್ತ್ರಾಸ್ತ್ರ ಸಾಗಣೆ ಮಾಡುತ್ತಿದ್ದ ಎಂಟು ಉಗ್ರರ ಬಂಧನ

**ಅ.ಶ. ಸುದ್ದಿ ಇಂಫಾಲ**

**ಇಂಫಾಲ, ಜೂ. 19 (ಪಿಟಿಐ) ಮಣಿಪುರದ ಕಣಿವೆ ಜಿಲ್ಲೆಗಳ ವಿವಿಧ ಭಾಗಗಳಿಗೆ ಸುಲಿಗೆ ಚಟುವಟಿಕೆಗಳು ಮತ್ತು ಶಸ್ತ್ರಾಸ್ತ್ರ ಮತ್ತು ಸ್ಫೋಟಕ ವಸ್ತುಗಳನ್ನು ಪೂರೈಸುವ ಆರೋಪದ ಮೇಲೆ ನಿಷೇಧಿತ ಸಂಘಟನೆಯ ಎರಡು ಬಣಗಳಿಗೆ ಸೇರಿದ ಎಂಟು ಉಗ್ರರನ್ನು ಭದ್ರತಾ ಪಡೆಗಳು ಬಂಧಿಸಿವೆ.**

ಹ್ಯಾಂಡ್ ಗ್ರೆನೇಡ್‌ಗಳನ್ನು ಪೂರೈಸಿದ ಆರೋಪದ ಮೇಲೆ ಇಂಫಾಲ ಪೂರ್ವ ಜಿಲ್ಲೆಯ ಹಲವಾರು ಸ್ಥಳಗಳಿಂದ ನಿಷೇಧಿತ ಕೆಸಿಪಿ ( ಪೀಪಲ್ಸ್ ವಾರ್ ಗ್ರೂಪ್) ನ ನಾಲ್ವರು ಸದಸ್ಯರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಹೇಳಿಕೆ ತಿಳಿಸಿದೆ. ಎಲ್ಲರೂ ಇಂಫಾಲ ಪೂರ್ವದ ನಿವಾಸಿಗಳು ಎಂದು ಪೊಲೀಸರು ತಿಳಿಸಿದ್ದಾರೆ.ಸುಲಿಗೆ ಚಟುವಟಿಕೆಗಳು ಮತ್ತು




ಶಸ್ತ್ರಾಸ್ತ್ರ ಪೂರೈಕೆಯಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ಕಾಕ್ಚಿಂಗ್ ಜಿಲ್ಲೆಯಿಂದ ನಿಷೇಧಿತ ಕೆಸಿಪಿ (ಎಂಎಫ್‌ಎಲ್) ನ ನಾಲ್ವರು ಸಕ್ರಿಯ ಸದಸ್ಯರನ್ನು ಭದ್ರತಾ ಪಡೆಗಳು ಬಂಧಿಸಿವೆ. ಅಕ್ರಮ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಎಲ್ಲಾ ಜನರನ್ನು ನಿಶ್ಯಸ್ತ್ರಗೊಳಿಸದ ಹೊರತು ರಾಜ್ಯದಲ್ಲಿ ಶಾಂತಿ ಅಸಂಭವ ಎಂದು ಮುಖ್ಯಮಂತ್ರಿ ವೈ ಖೇಮ್‌ಚಂದ್ ಸಿಂಗ್ ಇತ್ತೀಚೆಗೆ ಹೇಳಿದ್ದಾರೆ. 2023 ರಲ್ಲಿ ಮಣಿಪುರದಲ್ಲಿ ಜನಾಂಗೀಯ ಹಿಂಸಾಚಾರ ಪ್ರಾರಂಭವಾದಾಗಿನಿಂದ ಭದ್ರತಾ ಪಡೆಗಳಿಂದ ಲೂಟಿ ಮಾಡಲಾದ ಮತ್ತು ಅಕ್ರಮವಾಗಿ ಖರೀದಿಸಿದ ಬಂದೂಕುಗಳು ಸೇರಿದಂತೆ ಅಕ್ರಮ ಶಸ್ತ್ರಾಸ್ತ್ರಗಳನ್ನು ಬಳಸಲಾಗುತ್ತಿದೆ. ಎರಡು ವರ್ಷಗಳ ಹಿಂದೆ ಜನಾಂಗೀಯ ಹಿಂಸಾಚಾರ ಭುಗಿಲೆದ್ದಾಗಿನಿಂದ ಭದ್ರತಾ ಪಡೆಗಳು ಮಣಿಪುರದಲ್ಲಿ ಶೋಧ ಕಾರ್ಯಾಚರಣೆಗಳನ್ನು ನಡೆಸುತ್ತಿವೆ. ಮೇ 2023 ರಿಂದ ಮೈತೈಸ್ ಮತ್ತು ಕುಕಿ–ಜೋ ಗುಂಪುಗಳ ನಡುವಿನ ಜನಾಂಗೀಯ ಹಿಂಸಾಚಾರದಲ್ಲಿ 260 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.

# ಟೆಲಿಗ್ರಾಂ ತಾತ್ಕಾಲಿಕ ನಿರ್ಬಂಧಕ್ಕೆ ದೆಹಲಿ ಹೈಕೋರ್ಟ್ ಹಸಿರು ನಿಶಾನೆ

**ಅ.ಶ. ಸುದ್ದಿ ನವದೆಹಲಿ**

**ನವದೆಹಲಿ: ನಡೆಯಲಿರುವ ನೀಟ್ ಪರೀಕ್ಷೆಗೆ ಮುನ್ನ ಟೆಲಿಗ್ರಾಂ ಮೆಸೇಜಿಂಗ್ ಅಪ್ಲಿಕೇಶನ್‌ಗೆ ತಾತ್ಕಾಲಿಕವಾಗಿ ನಿರ್ಬಂಧ ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ದೆಹಲಿ ಹೈಕೋರ್ಟ್ ಸಮರ್ಥಿಸಿದೆ. ನ್ಯಾಯಮೂರ್ತಿ ತೇಜಸ್ ಕಾ–ರಿಯಾ ಅವರ ರಜಾಕಾಲೀನ ಪೀಠವು ತೀರ್ಪು ನೀಡಿದ್ದು, ಕೇಂದ್ರ ಸರ್ಕಾರ ಹೊರಡಿಸಿದ ಆದ–ೇಶವು ಅನುಪಾತ ಮೀರಿ ಕೈಗೊಂಡ ಕ್ರಮವಲ್ಲ ಎಂದು ಅಭಿಪ್ರಾಯಪಟ್ಟಿತು. ಅಲ್ಲದೆ, ಟೆಲಿಗ್ರಾಂ ಸೇವೆಯನ್ನು ನಿರ್ಬಂಧಿಸುವ ಅಧಿಕಾರ ಸರ್ಕಾರಕ್ಕೆ ಇದೆ ಮತ್ತು ಈ ಕ್ರಮವು ಅತ್ಯಂತ ಕಡಿಮೆ ನಿರ್ಬಂಧಾತ್ಮಕ ಕ್ರಮ ಎಂದು ನ್ಯಾಯಾಲಯ ಹೇಳಿದೆ.**

ಕೇಂದ್ರ ಸರ್ಕಾರದ ಆದೇಶವನ್ನು ಪ್ರಶ್ನಿಸಿದ್ದ ಟೆಲಿಗ್ರಾಂ ಪರ ವಕೀಲರು, ಈ ಕ್ರಮದ ಕಾನೂನುಬದ್ಧತೆಯನ್ನೇ ಪ್ರಶ್ನಿಸಿದ್ದರು. ಭಾರತದಲ್ಲಿ 15 ಕೋಟಿಗೂ ಹೆಚ್ಚು




ಬಳಕೆದಾರರು ಸರ್ಕಾರದ ಈ ನಿರ್ಧಾರದಿಂದ ಪರಿಣಾಮಕ್ಕೊಳಗಾಗಿದ್ದಾರೆ ಎಂದು ಅವರು ವಾದಿಸಿದ್ದರು. ವೈದ್ಯಕೀಯ ಪ್ರವೇಶಕ್ಕಾಗಿ ಮೇ 3ರಂದು ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ಮೇ 12ರಂದು ಪರೀಕ್ಷೆಯನ್ನು ರದ್ದುಗೊಳಿಸಿತ್ತು. ಕೇಂದ್ರದ ನಿರ್ಬಂಧ ಆದೇಶ ಟೆಲಿಗ್ರಾಂನಲ್ಲಿ ಈಗಾಗಲೇ ಪೋಸ್ಟ್ ಮಾಡಲಾದ ಸಂದೇಶಗಳನ್ನು ನಂತರ ಸಂಪಾದಿಸುವ ಸೌಲಭ್ಯವನ್ನು ಭಾರತದಲ್ಲಿ ಜೂನ್ 30ರವರೆಗೆ ನಿಷ್ಕ್ರಿಯಗೊಳಿಸಲು ಸರ್ಕಾರ ಪ್ರತ್ಯೇಕ ನಿರ್ದೇಶನ ನೀಡಿದೆ.

ರಾಷ್ಟ್ರೀಯ ಮಟ್ಟದ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆಯ ಬಗ್ಗೆ ಬಳಿಕ ನಕಲಿ ಸಾಕ್ಷ್ಯಗಳನ್ನು ಸೃಷ್ಟಿಸಲು ಈ ವೈಶಿಷ್ಟ್ಯವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂಬ ಆತಂಕದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರೀಕ್ಷಾ ಭದ್ರತೆಗೆ ಆದ್ಯತೆ ನೀಟ್–ಯುಜಿ ಮರುಪರೀಕ್ಷೆಯ ಪಾವಿತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಕೈಗೊಂಡಿರುವ ಈ ಕ್ರಮಕ್ಕೆ ದೆಹಲಿ ಹೈಕೋರ್ಟ್ ಬೆಂಬಲ ನೀಡಿರುವುದು ಮಹತ್ವದ ಬೆಳವಣಿಗೆಯಾಗಿದೆ.

# ವಿಶ್ವಕಪ್‌ನಲ್ಲಿ ಮೆಕ್ಸಿಕೋಗೆ ಐತಿಹಾಸಿಕ ಸಾಧನೆ

**ಅ.ಶ. ಸುದ್ದಿ ಗ್ವಾಡಲಜಾರಾ**

**ಗ್ವಾಡಲಜಾರಾ: ದಕ್ಷಿಣ ಕೊರಿಯಾ ತಂಡದ ರಕ್ಷಣಾ ವಿಭಾಗದ ತಪ್ಪನ್ನು ಸದುಪಯೋಗಪಡಿಸಿಕೊಂಡ ಮೆಕ್ಸಿಕೋ 1–0 ಅಂತರದ ಗೆಲುವು ಸಾಧಿಸಿ, 2026ರ ಫುಟ್‌ಬಾಲ್ ವಿಶ್ವಕಪ್‌ನಲ್ಲಿ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ತವರಿನಲ್ಲಿ ಸಾವಿರಾರು ಅಭಿಮಾನಿಗಳ ಸಮುಖದಲ್ಲಿ ಸತತ ಎರಡನೇ ಗೆಲುವು ದಾಖಲಿಸಿದ ಮೆಕ್ಸಿಕೋ ತಂಡದ ಆಟಗಾರರು ಪಂದ್ಯ ಅಂತ್ಯದಲ್ಲಿ ಮೈದಾನದ ಮಧ್ಯಭಾಗದಲ್ಲಿ ಸಂಭ್ರಮಾಚರಣೆ ನಡೆಸಿ ಅಭಿಮಾನಿಗಳಿಗೆ ಅಭಿನಂದನೆ ಸಲ್ಲಿಸಿದರು.**

ರೊಮೊ ಗೋಲು ನಿರ್ಣಾಯಕ ಪಂದ್ಯದ 50ನೇ ನಿಮಿಷದಲ್ಲಿ ಮೆಕ್ಸಿಕೋದ ಲೂಯಿಸ್ ರೊಮೊ ನಿರ್ಣಾಯಕ ಗೋಲು ಗಳಿಸಿದರು. ದಕ್ಷಿಣ ಕೊರಿಯಾದ ಗೋಲ್‌ಕೀಪರ್ ಕಿಮ್ ಸೆಯುಂಗ್–ಗ್ಯು ಹಾಗೂ ರಕ್ಷಣಾ ಆಟಗಾರ ಲೀ ಗಿ–ಹ್ಯುಕ್ ನಡುವೆ ಉಂಟಾದ ಗೊಂದಲದಿಂದ ಚೆಂಡು ಕೈತಪ್ಪಿ ಬಿದ್ದಾಗ, ರೊಮೊ



ಸುಲಭವಾಗಿ ಚೆಂಡನ್ನು ಗೋಲಿನ ಬಲೆಗೆ ತಳ್ಳಿದರು. ಕೊರಿಯಾದ ಹೋರಾಟ ವಿಫಲ ನಂತರ 87ನೇ ನಿಮಿಷದಲ್ಲಿ ದಕ್ಷಿಣ ಕೊ–ರಿಯಾ ಸಮಬಲ ಸಾಧಿಸುವ ಅವಕಾಶ ಪಡೆದಿತ್ತು. ಚೋ ಗುಯೆ–ಸುಂಗ್ ಅವರ ಹೆಡರ್ ಅನ್ನು ಮೆಕ್ಸಿಕೋ ಗೋಲ್‌ಕೀಪರ್ ರೌಲ್ ರಾಂಗೆಲ್ ಅದ್ಭುತವಾಗಿ ತಡೆದರು. ಮರುಕ್ಷಣವೇ ಯಾಂಗ್ ಹ್ಯುನ್–ಜುನ್ ಹೊಡೆದ ರೀಬೌಂಡ್ ಪ್ರಯತ್ನವನ್ನೂ ರಾಂಗೆಲ್ ಕೈಚಾಚಿ ತಡೆದು ತಂಡದ ಗೆಲುವನ್ನು ಖಚಿತಪಡಿಸಿದರು.

ಗುಂಪು ಎ ಯಲ್ಲಿ ಮೆಕ್ಸಿಕೋ ಅಗ್ರಸ್ಥಾನ ಈ ಗೆಲುವಿನೊಂದಿಗೆ ಮೆಕ್ಸಿಕೋ ಎರಡು ಪಂದ್ಯಗಳಿಂದ 6 ಅಂಕಗಳನ್ನು ಪಡೆದು ಗುಂಪು ಎ ಯಲ್ಲಿ ಅಗ್ರಸ್ಥಾನಕ್ಕೇರಿದೆ. ಮೆಕ್ಸಿಕೋ– 6 ಅಂಕ,ದಕ್ಷಿಣ ಕೊರಿಯಾ– 3 ಅಂಕ ಚೆಕ್ ಗಣರಾಜ್ಯ–1 ಅಂಕ ಮತ್ತು ದಕ್ಷಿಣ ಆಫ್ರಿಕಾ ? 1 ಅಂಕ ಗಳಿಸಿದೆ ಇದರಲ್ಲಿ 2 ತಂಡ ಪಂದ್ಯಾವಳಿಯಿಂದ ನಿರ್ಗಮಿಸಲಿದೆ. ಮೆಕ್ಸಿಕೋ ತರಬೇತುದಾರ ಅಗ್ವಿರೆ ಈ ಪಂದ್ಯ ಅತ್ಯುತ್ತಮ ಪಂದ್ಯವಾಗಿರಲಿಲ್ಲ. ಎದುರಾಳಿಗಳು ನಮಗೆ ಹೆಚ್ಚಿನ ಅವಕಾಶ ನೀಡಲಿಲ್ಲ. ಆದರೂ ಅವರ ತಪ್ಪನ್ನು ಬಳಸಿಕೊಂಡು ಗೋಲು ಗಳಿಸಿ ಜಯ ಸಾಧಿಸಿದ್ದೇವೆ.

ನಾಕೌಟ್ ಹಂತ ಖಚಿತವಾದುದು ಆಟಗಾರರ ಮೇಲಿದ್ದ ಒತ್ತಡವನ್ನು ಕಡಿಮೆ ಮಾಡಿದೆ ಎಂದು ಹೇಳಿದರು. ದಕ್ಷಿಣ ಕೊರಿಯಾದ ನಾಯಕ ಸೊನ್ ಮತ್ತೊಮ್ಮೆ ನಿರಾಸೆ ಮೂಡಿಸುವ ಪ್ರದರ್ಶನ ನೀಡಿದರು. ಪಂದ್ಯದ 57ನೇ ನಿಮಿಷದಲ್ಲಿ ಅವರನ್ನು ಬದಲಾಯಿಸಲಾಯಿತು.

ವಿಶ್ವಕಪ್‌ನಲ್ಲಿ ದಕ್ಷಿಣ ಕೊ–ರಿಯಾದ ಪರ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರ ಎಂಬ ದಾಖಲೆ ಬೆನ್ನಟ್ಟುತ್ತಿರುವ ಸೊನ್, ಇದುವರೆಗೆ ಮೂರು ವಿಶ್ವಕಪ್‌ಗಳಲ್ಲಿ ಮೂರು ಗೋಲುಗಳನ್ನು ದಾಖಲಿಸಿದ್ದಾರೆ. 45,664 ಪ್ರೇಕ್ಷಕರ ಸಾಮರ್ಥ್ಯದ ಸ್ಟೇಡಿಯಂನಲ್ಲಿ 45,522 ಪ್ರೇಕ್ಷಕರು ಪಂದ್ಯ ವೀಕ್ಷಿಸಿದರು. ಪಂದ್ಯಕ್ಕೂ ಮುನ್ನ ದೇಶದ ವಿವಿಧ ಭಾಗಗಳ ಅಭಿಮಾನಿ ವಲಯಗಳಲ್ಲಿ ಭಾರೀ ಸಂಭ್ರಮ ಕಂಡುಬಂದಿತು. ಇದೇ ವೇಳೆ, ಮೆಕ್ಸಿಕೋದಲ್ಲಿ ಕಾಣೆಯಾಗಿರುವ ಸುಮಾರು 1.3 ಲಕ್ಷ ಜನರ ಕುಟುಂಬಸ್ಥರು ಗ್ವಾಡಲಜಾರಾದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿ ಸರ್ಕಾರದ ಗಮನ ಸೆಳೆದರು. ಮೆಕ್ಸಿಕೋ ತನ್ನ ಕೊನೆಯ ಗುಂಪು ಪಂದ್ಯದಲ್ಲಿ ಚೆಕ್ ಗಣರಾಜ್ಯವನ್ನು ಎದುರಿಸಲಿದ್ದು, ದಕ್ಷಿಣ ಕೊರಿಯಾ ದಕ್ಷಿಣ ಆಫ್ರಿಕಾ ವಿರುದ್ಧ ಸೆಣಸಲಿದೆ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka